ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ

ಮೇ 2009 ಸಂಪುಟ 3 ಸಂಚಿಕೆ 3

India ECHOES
ONE WORLD ONE HUMANITY
For Private Circulation Only

# ಪ್ರಿಯ ಬಾಬೂಜಿಮಹಾರಾಜರ 111ನೇ ಹುಟ್ಟುಹಬ್ಬದ ಆಚರಣೆ




ಬಾಬೂಜಿ ಮಹಾರಾಜರ 111ನೇ ಹುಟ್ಟುಹಬ್ಬವನ್ನು ತಿರುಪ್ಪೂರಿನ ಡಿ.ಜೆ.ಪಾರ್ಕ್‌ನಲ್ಲಿ ಏಪ್ರಿಲ್ 29ರಿಂದ 1ನೇ ಮೇ 2010 ರವರೆಗೆ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸುಮಾರು 9,000 ಅಭ್ಯಾಸಿಗಳು ಒಟ್ಟುಗೂಡಿದ್ದರು. 29ರಂದು ಗುರುಗಳು ಸತ್ಸಂಗವನ್ನು ನಡೆಸಿಕೊಟ್ಟರು ಮತ್ತು ಅನೇಕ ಹೊಸ ಪ್ರಕಟನೆಗಳನ್ನು ಬಿಡುಗಡೆ ಮಾಡಿದರು. 30ನೇ ತಾರೀಖು ಬೆಳಿಗ್ಗೆ ಅವರು ಸತ್ಸಂಗ ನಡೆಸಿಕೊಟ್ಟ ನಂತರ ಬಾಬೂಜಿ ಮಹಾರಾಜರಿಂದ ದೊರೆತ ಮೂರು ಸಂದೇಶಗಳನ್ನು ಓದಿದರು ಮತ್ತು ಒಂಬತ್ತು ವಿವಾಹಗಳನ್ನು ನೆರವೇರಿಸಿದರು.

ಏಪ್ರಿಲ್ 19, 2010ರ ಸಂದೇಶದಲ್ಲಿ (ಬಾಬೂಜಿ ಮಹಾರಾಜರ ಮಹಾಸಮಾಧಿಯ ದಿನ) ಬಾಬೂಜಿ ಹೇಳುತ್ತಾರೆ, "ತನ್ನ ಜೀವನದ ಅಂತಿಮ ಗುರಿಯಾದ ದೈವತ್ವದ ಪ್ರಾಪ್ತಿಗಾಗಿ ಅರಳುವ ಆತ್ಮಕ್ಕೆ ನಮ್ಮ ಹಾದಿಯಲ್ಲಿ ಎಲ್ಲವೂ ಸಹಕಾರ ನೀಡುತ್ತವೆ. ಪ್ರಾರಂಭದಲ್ಲಿ ಅವರಿಗೆ (ಅಭ್ಯಾಸಿಗಳಿಗೆ) ಮೂಲತತ್ವಗಳನ್ನು ನೀಡಲಾಗುತ್ತದೆ. ತಮ್ಮ ಪ್ರಯತ್ನ ಮತ್ತು ಧೃಡ ಯತ್ನಗಳಿಂದ ಪ್ರಗತಿ ಹೊಂದುವುದು ಅವರಿಗೆ ಬಿಟ್ಟದ್ದು."

ಎರಡನೇ ಸಂದೇಶವು ಏಪ್ರಿಲ್ 29, 2010ರಂದು ದೊರೆತಿದ್ದು: " ಈ ಕೆಳ ಕಾಣುವ ನಂಬಿಕಸ್ಥ ಆತ್ಮಗಳ ಈ ಸಮೂಹವು ಹೃದಯಸ್ಪರ್ಶಿಯಾಗಿದೆ. ನಿಜವಾದ ಒಂದು ಪ್ರೇಮಗೀತೆಯು ನಮ್ಮಲ್ಲಿ ಏಳುತ್ತಿದೆ.... ಈ ಹುಟ್ಟುಹಬ್ಬದ ಸಮಾರಂಭಕ್ಕಿಂತ ಹೆಚ್ಚಾಗಿ ಸಮಾರಂಭದಲ್ಲಿ ಇಡಿಯ ಮಿಷನ್ ಮೇಲೇರುತ್ತಿದೆ. ಹೃದಯಗಳಿಗೆ ಹೊಳಪು ನೀಡುವ ದಿವ್ಯಧಾರೆಯನ್ನು ಇದು ಆಕರ್ಷಿಸುತ್ತದೆ."

30ನೇ ತಾರೀಖಿನ ಬೆಳಿಗ್ಗೆ ಪಡೆದ ಸಂದೇಶದಲ್ಲಿ ವಿಶೇಷವಾಗಿ ಗುರುಗಳನ್ನು ಉದ್ದೇಶಿಸುತ್ತಾ ಬಾಬೂಜಿಯವರು ಹೇಳುತ್ತಾರೆ, " ನೀನು ಪುರುಷರ ಮುಂದಾಳು, ನನ್ನ ಪುತ್ರನೇ, ಹುಟ್ಟಾ ಸುವ್ಯವಸ್ಥಕ. ಈ ಆಯಾಮವು ಮುಂದಿನ ಅನೇಕ ಶತಮಾನಗಳವರೆಗೆ ಆದರ್ಶ ವ್ಯಕ್ತಿಯನ್ನಾಗಿಸುವುದರ ಮೂಲಕ ನಿನಗೆ ನಮ್ಮ ಮಿಷನ್ನಿನಲ್ಲಿ ವಿಶೇಷ ಸ್ಥಾನ ದೊರಕಿಸುತ್ತದೆ. ಅದ್ವಿತೀಯ ಶಕ್ತಿಯ ವಿನಃ ಬಹಳ ಕಾಲ ಮೊದಲೇ ನಶಿಸಿಹೋಗಬೇಕಾಗಿದ್ದ ಭವಿಷ್ಯದ ಪ್ರಪಂಚವು ಅದರ ಬೆಲೆಯನ್ನು ಗುರುತಿಸುವಂತಾಗಲು ಒಟ್ಟುಗೂಡಲಿ."

ಒಬ್ಬ ಸಾಧಕನಿಗೆ ಅವಶ್ಯವಾದವುಗಳೆಂದರೆ ಗುರುಗಳ ಮೇಲೆ ಪ್ರೇಮ, ಗುರುಗಳೊಂದಿಗೆ ಸತ್ಸಂಗ ಮತ್ತು ಗುರುಗಳ ಆಜ್ಞಾಪಾಲನೆ. ಪ್ರತಿನಿತ್ಯದ ಸಾಧನೆಯಿಂದ ನಮ್ಮಲ್ಲಿ ಯಾವಾಗಲೂ ಜ್ವಾಲೆಯನ್ನು ಉರಿಸುತ್ತಲೇ ಇರಬೇಕು. ಅವರು ಹೃದಯಭರಿತ ಪ್ರೇಮದೊಡನೆ ಮತ್ತು ಆಧ್ಯಾತ್ಮಿಕ ಪ್ರಗತಿಯ ನಿರಪೇಕ್ಷೆಯಲ್ಲಿ ಬಾಬೂಜಿ ಮಹಾರಾಜರೊಂದಿಗೆ ಕಳೆದ ದಿನಗಳನ್ನು ನೆನಪಿಸಿಕೊಂಡರು. ಅವರು ಹೇಳಿದರು, "ಇದೇನು ಕೊಡು–ಕೊಳ್ಳುವಿಕೆಯ ಸಂದರ್ಭವಲ್ಲ. ಇದು ಅವರು ತನ್ನ ಇಚ್ಛೆಯಂತೆ ನೀಡುವುದೆಲ್ಲವನ್ನೂ ಪಡೆಯುವ ಪ್ರಯತ್ನದಲ್ಲಿ ನಿಮ್ಮಲ್ಲಿರುವುದೆಲ್ಲವನ್ನು ಮೈದಾನದಲ್ಲಿಡುವ ಮತ್ತು ಅವರು ಇದಕ್ಕಾಗಿ ನೀವು ಸರಿಹೊಂದುವಿರೆಂದು ತಿಳಿದಾಗ ಅವರ ಕಾಲದಲ್ಲಿ ಸಂತಸ ಪಡುವ ಪರಿ."

"ಸಹಜಮಾರ್ಗವು ಸರಳತೆಯನ್ನು ಪ್ರತಿಪಾದಿಸುತ್ತದೆ....ನಿಮ್ಮಲ್ಲಿ ಪ್ರತಿಯೊಬ್ಬರೂ

For the complete audio of this speech please visit http://www.sahajmarg.org/audio/talk/april-30-2010-tiruppur






ನಿಮ್ಮ ವ್ಯಕ್ತಿಗತ ಜೀವನದಲ್ಲಿ ಸರಳವಾಗಿರಲು ಪ್ರಯತ್ನಿಸಿ, ಅವಶ್ಯಕತೆಗಳನ್ನು ಕಡಿಮೆಮಾಡಿ, ಬಾಬೂಜಿ ಮಹಾರಾಜರು ಹೇಳಿರುವಂತೆ ನಮ್ಮ ಅಗತ್ಯಗಳು ಪೂರೈಸಲ್ಪಡುತ್ತವೆ, ನಮ್ಮ ಬಯಕೆಗಳು ಸಮಂಜಸವಲ್ಲ ಎನ್ನುವುದನ್ನು ನೆನಪಿಟ್ಟು ಬಯಕೆಗಳನ್ನು ಸರಳಗೊಳಿಸಿ.”

ರಾತ್ರಿಯ ಭೋಜನದ ನಂತರ LMOIS ನ ಶಿಕ್ಷಕಿಯರಿಂದ ನೃತ್ಯ ಕಾರ್ಯಕ್ರಮ, ಮುಂಬೈನ ಅಭ್ಯಾಸಿಗಳಿಂದ ನಾಟಕ ಹಾಗು ಡಾ.ಜಯಂತಿ ಮತ್ತು ಕುಮರೇಶ್‌ರವರಿಂದ ಸಂಗೀತವನ್ನೊಳಗೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳಿದ್ದವು. ಅಭ್ಯಾಸಿಗಳು ಕೂಟದ ಅಧ್ಯಾತ್ಮಿಕ ಪರಿಸರದಲ್ಲಿ ಹಿತ ಅನುಭವಿಸಿದರು ಹಾಗೂ ಗುರುಗಳ ಸೇವೆಯಲ್ಲಿ ಮತ್ತು ಅವರ ಕಾರ್ಯದಲ್ಲಿ ಪಾಲ್ಗೊಳ್ಳಲು ಇದೊಂದು ಅವಕಾಶವಾಗಿತ್ತು.





## ಗುರುಗಳ ಪ್ರವಾಸ

### ಚೆನ್ನೈ



ಜಬಲ್‌ಪುರದ ಬಸಂತ ಉತ್ಸವದ ನಂತರ ಫೆಬ್ರವರಿ 10ರಂದು ಗುರುಗಳು ಚೆನ್ನೈಗೆ ಹಿಂದಿರುಗಿದರು. ಅವರು ತಲುಪಿದ ಸ್ವಲ್ಪ ಹೊತ್ತಿನಲ್ಲೇ ಒಮೇಗಾ ಅಂತರಾಷ್ಟ್ರೀಯ ಶಾಲೆ ( LMOIS) ಯಲ್ಲಿ ನಡೆಯುತ್ತಿದ್ದ ಕಟ್ಟಡ ನಿರ್ಮಾಣದ ಮೇಲ್ವಿಚಾರಣೆಗೆ ಭೇಟಿ ನೀಡಿದರು. ಅನೇಕ ವಾರಗಳ ಪ್ರಯಾಸಕರ ಪ್ರವಾಸದ ನಂತರವೂ ಏಕೆ ವಿಶ್ರಾಂತಿ ತೆಗೆದುಕೊಳ್ಳುತ್ತಿಲ್ಲವೆಂದೂ ಎಲ್ಲರೂ ಆಶ್ಚರ್ಯ ಪಡುತ್ತಿದ್ದರೆ, ಗುರುಗಳಲ್ಲಿ ಮಗುವಿನ ಉತ್ಸಾಹವಿದ್ದಿತು. ಆನಂತರದ ಕೆಲವು ದಿನಗಳಲ್ಲಿ ಗುರುಗಳು ತಮಗೆ ಅವಶ್ಯವಾಗಿದ್ದ ವಿಶ್ರಾಂತಿಯನ್ನು ಪಡೆದರು.

ಫೆಬ್ರವರಿ 15ರಂದು ಗುರುಗಳು ರಷ್ಯಾದ ಅಭ್ಯಾಸಿಗಳೊಂದಿಗೆ ಉಪಹಾರವನ್ನು ಸ್ವೀಕರಿಸಿದರು. ಶಾಸ್ತ್ರಗಳು, ಧಾರ್ಮಿಕ ಆಚರಣೆಗಳು ಹೀಗೆ ಮುಂತಾದ ವಿಷಯಗಳ ಬಗ್ಗೆ ಅವರೊಡನೆ ಮಾತನಾಡಿದರು. “ಜೀವನದಲ್ಲಿ ನಮ್ಮ ಗುರಿಯು ನಮ್ಮ ಮೂಲ ನೆಲೆಯನ್ನು ತಲುಪುವುದಾಗಿದೆ ಮತ್ತು ಅದಕ್ಕಾಗಿಯೇ ಧರ್ಮವು ಒಂದು ಮಾರ್ಗವಾಗಿತ್ತು. ಆದರೆ ಧರ್ಮವು ವಿಶ್ವದ ಜನರನ್ನು ವಿಭಜಿಸುತ್ತಿದೆ, ಆದರೆ ಆಧ್ಯಾತ್ಮವು ಒಂದುಗೂಡಿಸುತ್ತಿದೆ”ಎಂದು ಅವರಿಗೆ ಹೇಳಿದರು.

ಭಯವನ್ನು ತೆಗೆದುಹಾಕುವುದು ಹೇಗೆ ಎಂಬ ಪ್ರಶ್ನೆಗೆ, “ಕ್ರೈಸ್ತ ಧರ್ಮದಲ್ಲಿ, ಜೀಸಸ್ ಹೇಳಿದ್ದಾರೆ ಪರಿಪೂರ್ಣವಾದ ಪ್ರೇಮ ಭಯವನ್ನು ಹೋಗಲಾಡಿಸುತ್ತದೆಯೆಂದು. ನಮ್ಮಲ್ಲಿ ಪರಿಪೂರ್ಣ ಪ್ರೇಮವಿಲ್ಲ, ನಮ್ಮಲ್ಲಿ ಪ್ರೇಮವೆಂಬುದೇ ಇಲ್ಲ. ನಮ್ಮಲ್ಲಿ ಕೇವಲ ಮೋಹವಿದೆಯಷ್ಟೆ, ನಮ್ಮಲ್ಲಿ ಅವಲಂಬನೆಯಿದೆ, ನಮ್ಮಲ್ಲಿ ಅವಶ್ಯಕತೆಯಿದೆ. ಪ್ರೇಮವೆಲ್ಲಿದೆ? ಆದುದರಿಂದಲೇ ಎಲ್ಲಿ ಪ್ರೇಮವೆಂಬುದಿಲ್ಲವೋ ಅಲ್ಲಿ ಭಯವಿರುತ್ತದೆ. ನಾವೆಲ್ಲ ಯಾರನ್ನೋ ಪ್ರೀತಿಸುತ್ತಿದ್ದೇವೆ ಅಂದುಕೊಂಡಿದ್ದೇವೆ, ನಿಜವಾಗಿ ನಾವು ಪ್ರೀತಿಸುವುದಿಲ್ಲ. ಪ್ರೇಮವೊಂದೇ ಭಯವನ್ನು ಹೋಗಲಾಡಿಸಬಲ್ಲದು. ನೀವು ನಿಮ್ಮ ತಂದೆಗೆ ಭಯಗೊಂಡರೆ ಅವರನ್ನು ನೀವು ಪ್ರೀತಿಸಲಾರಿರಿ. ನೀವು 'ನಾನು ನಿನ್ನನ್ನು ಪ್ರೀತಿಸುತ್ತೇನೆ' ಎಂದು ಹೇಳಿದರೆ ಅದರಂತೆಯೇ ನಡೆಯಬೇಕು, ಕೇವಲ ಔಪಚಾರಿಕವಾಗಿ ಹೇಳುವುದಲ್ಲ ಎಂದು ಹೇಳಿದರು. ನಂತರದ ಕೆಲವು ದಿನಗಳಲ್ಲಿ ಅಭ್ಯಾಸಿಗಳನ್ನು, ವಿಶೇಷವಾಗಿ ವಿದೇಶಗಳಿಂದ ಬಂದಿದ್ದ ಅಭ್ಯಾಸಿಗಳನ್ನು ಭೇಟಿಮಾಡುವುದರಲ್ಲಿ ನಿರತರಾಗಿದ್ದರು, ಪ್ರತಿ ಸಂಜೆ ತಮ್ಮ ಕುಟೀರದ ಹುಲ್ಲು ಮೈದಾನದಲ್ಲಿ ಅಭ್ಯಾಸಿಗಳೊಂದಿಗೆ ಮಾತನಾಡುತ್ತಾ ಕುಳಿತುಕೊಳ್ಳುತ್ತಿದ್ದರು. ಹಾಗೂ ಇದು ಅಲ್ಲಿದ್ದವರ ಅದೃಷ್ಟಕ್ಕೆ ಅವರೊಂದಿಗೆ ಒಂದು ಬೈಠಕದೊಂದಿಗೆ ಸಮಾಪ್ತಿಯಾಗುತ್ತಿತ್ತು.



With abhyasis from Mumbai







ಫೆಬ್ರವರಿ 25ರಂದು ಧ್ಯಾನಮಂದಿರದಲ್ಲಿ ಸತ್ಸಂಗವನ್ನು ನಡೆಸಿಕೊಟ್ಟರು, ನಂತರ ಕೆಲವು ಮದುವೆಗಳನ್ನು ನಡೆಸಿಕೊಟ್ಟರು.

400 ಅಭ್ಯಾಸಿಗಳ ದೊಡ್ಡ ಗುಂಪೊಂದು ಮುಂಬೈ ಕೇಂದ್ರದಿಂದ ಗುರುಗಳೊಂದಿಗೆ ಇರಲು ಬಂದಿದ್ದರು. ಮೇಲಿಂದ ಮೇಲೆ ಬೈಠಕ್ ನೀಡುವುದರೊಂದಿಗೆ ಹಾಗೂ ಅನೇಕರನ್ನು ಪ್ರತ್ಯೇಕವಾಗಿ ಭೇಟಿಯಾಗುವುದರೊಂದಿಗೆ ಎಲ್ಲರಿಗೂ ವಿಶೇಷವಾದ ಗಮನವನ್ನು ನೀಡಿದರು. ಶನಿವಾರ ಸಂಜೆಯೂ ಸಹ ಅವರೆಲ್ಲರನ್ನು ಡಾರ್ಮೆಟರಿಯಲ್ಲಿ ಭೇಟಿ ಮಾಡಿ ಮಾತನಾಡಿಸಿದರು. ಎಲ್ಲಾ ಕೇಂದ್ರಗಳಿಗೂ ಪ್ರವಾಸ ಮಾಡುವುದಕ್ಕೆ ಅವರಿಗೆ ಕಷ್ಟವೆನಿಸುತ್ತಿರುವ ಇತ್ತೀಚಿನ ದಿನಗಳನ್ನು ಅಭ್ಯಾಸಿಗಳು ಅವರನ್ನು ಭೇಟಿ ಮಾಡಲು ಬಂದುದಕ್ಕಾಗಿ ಧನ್ಯವಾದಗಳನ್ನು ಹೇಳಿದರು. ಅವರೆಲ್ಲರೂ ಹೀಗೆಯೇ ಆಗಾಗ ಬರುತ್ತಿರಲೆಂದು ಹಾರೈಸಿದರು.

ಫೆಬ್ರವರಿ 28ರಂದು ಮುಂಬಯಿಯ ಅಭ್ಯಾಸಿಗಳು ಬಾಬೂಜಿ ಮಹಾರಾಜರ ಜೀವನವನ್ನು ಕುರಿತಾದ ಒಂದು ವಿಶೇಷವಾದ ದೃಶ್ಯನಾಟಕವನ್ನು ಪ್ರಸ್ತುತ ಪಡಿಸಿದರು. ಅದು ಬಾಬೂಜಿಯವರ ಜೀವನದ ಅನೇಕ ಸಂಗತಿಗಳನ್ನು ವರ್ಣಿಸುತ್ತಾ ಎಲ್ಲರ ಮನಮುಟ್ಟಿತು. ಕಾರ್ಯಕ್ರಮದ ನಂತರ ಭಾಗವಹಿಸಿದವರನ್ನು ಗುರುಗಳು ತಮ್ಮ ಕುಟೀರದಲ್ಲಿ ಭೇಟಿಮಾಡಿದರು. ಬಾಬೂಜಿಯವರೊಂದಿಗಿನ ಅವರ ನೆಚ್ಚಿನ ನೆನಪುಗಳನ್ನು ಸ್ಮರಿಸುತ್ತಾ ಅವರೊಂದಿಗೆ ಸ್ವಲ್ಪ ಸಮಯ ಕಳೆದರು. ಅಲ್ಲಿಯ ವಾತಾವರಣವು ಎಷ್ಟು ದಿವ್ಯವಾಗಿತ್ತೆಂದರೆ ಅವರೆಲ್ಲರೂ ನಿಜವಾಗಿಯೂ ಷಹಜಹಾನ್‌ಪುರದಲ್ಲಿ ಇದ್ದಂತೆಯೇ ಅನುಭವಿಸಿದರು.

## ತಿರುಚ್ಚಿ

ಗುರುಗಳು 30 ಅಭ್ಯಾಸಿಗಳೊಂದಿಗೆ ತಿರುಚಿಗೆ ತೆರಳಿದರು. ತಿರುಚಿಯಲ್ಲಿ ಬಂದಿಳಿದಾಗ ಅನೇಕ ಸ್ಥಳೀಯ ಅಭ್ಯಾಸಿಗಳಿಂದ ಸ್ವಾಗತಿಸಲ್ಪಟ್ಟರು. ಅವರು ನೇರವಾಗಿ ನಗರದಿಂದ 8 ಕಿ.ಮೀ ದೂರದಲ್ಲಿರುವ ಜಾನಕಿ ಫಾರಂಗೆ ತೆರಳಿದರು.

ಬುಧವಾರ, ಮಾರ್ಚ್ 3ರಂದು ಆಶ್ರಮದಲ್ಲಿ ಅವರು ಸತ್ಸಂಗವನ್ನು ನಡೆಸಿಕೊಟ್ಟರು. ಅವರು ಹಿಂದಿರುಗಿ ಬರುವಾಗ ಗೋಶಾಲೆಗೆ ಹೋಗಿ ಕೆಲವು ನವಜಾತ ಕರುಗಳಿಗೆ ನಾಮಕರಾಣವನ್ನು ಮಾಡಿದರು. ಅವರು ಬಹಳ ಸಂತೋಷವಾಗಿದ್ದರು ಹಾಗೂ ನಾಮಕರಣವನ್ನು ಆನಂದಿಸಿದರು.

ಮಾರ್ಚ್ 4ರಂದು ಗುರುಗಳು ಜಾನಕಿ ಫಾರಂನ ಗದ್ದೆಗಳಲ್ಲಿ ಭತ್ತದ ಪೈರನ್ನು ನಾಟಿಮಾಡುವುದನ್ನು ನೋಡಲು ಹೋದರು. ಗದ್ದೆಯಲ್ಲಿ ಕೆಸರಿದ್ದರೂ ಅನೇಕ ಅಭ್ಯಾಸಿಗಳು ನಾಟಿ ಮಾಡಲು ಮುಂದಾದರು ಮತ್ತು ಅಲ್ಲಿ ಒಂದು ಹಬ್ಬದ ವಾತಾವರಣವಿತ್ತು. ನೆರೆದಿದ್ದ ಎಲ್ಲಾ ಅಭ್ಯಾಸಿಗಳಿಗಾಗಿ ಗುರುಗಳು ಸತ್ಸಂಗ ನಡೆಸಿಕೊಟ್ಟರು, ಸಂಜೆಯ ವೇಳೆ ಗುರುಗಳು ಹೊರಬಂದು ಮನೆಯ ಮುಂದಿರುವ ಹುಲ್ಲಿನ ಮೈದಾನದಲ್ಲಿ ಕುಳಿತುಕೊಂಡರು ಹಾಗೂ ಕೆಲವು ವಿದೇಶಿ ಅಭ್ಯಾಸಿಗಳನ್ನು ಭೇಟಿಮಾಡಿದರು. ನಂತರ ಅವರು ಸತ್ಸಂಗವನ್ನು ನಡೆಸಿಕೊಟ್ಟರು.

ಮಾರ್ಚ್ 7, ಭಾನುವಾರದಂದು ಧ್ಯಾನಮಂದಿರದಲ್ಲಿದ್ದ ಅನೇಕ ಸ್ಥಳೀಯ ಅಭ್ಯಾಸಿಗಳಿಗೆ ಸತ್ಸಂಗವನ್ನು ನಡೆಸಿಕೊಟ್ಟರು. ಅವರು ಸಂತೋಷದಿಂದ್ದಂತೆಯೂ, ಆರೋಗ್ಯವಾಗಿದ್ದಂತೆಯೂ ಕಂಡರು. ಅವರು ಇಲ್ಲಿ ತಂಗಿದ್ದ ಸಮಯದಲ್ಲಿ ಅನೇಕ ಸಂದರ್ಭಗಳಲ್ಲಿ ಹೊರಬಂದು ಫಾರಂನ ಸುತ್ತಮುತ್ತ ನಡೆದಾಡಿದರು. ಅವರು ವಿಶ್ರಾಂತಿ ಪಡೆಯಬೇಕಿದ್ದ ಸಮಯದಲ್ಲಿ ಅನೇಕ ಕೆಲಸಗಳನ್ನು ಮಾಡುವುದನ್ನು ಮುಂದುವರೆಸಿದರು. ಮಾರ್ಚ್ 10ರಂದು ಗುರುಗಳು ಚೆನ್ನೈಗೆ ಬಂದರು ಹಾಗೂ ಅಲ್ಲಿಂದ ಖರಗ್‌ಪುರ್ ಮಾರ್ಗದಲ್ಲಿ ಕೋಲ್ಕತ್ತಾಗೆ ಹೋದರು.

## ಕ್ರೆಸ್ಟ್ –ಖರಗ್‌ಪುರ

ದಿನಾಂಕ 12ರಂದು ಗುರುಗಳು ಕ್ರೆಸ್ಟ್‌ನ ಆವರಣವನ್ನು ತಲುಪಿದರು. ಹಾಗೂ ಸಂಜೆ 5 ಗಂಟೆಗೆ ಸತ್ಸಂಗವನ್ನು ನಡೆಸಿಕೊಟ್ಟರು. ಎರಡನೆಯ NPTP(ಹೊಸ ಪ್ರಶಿಕ್ಷಕರ ತರಬೇತಿ ಕಾರ್ಯಕ್ರಮ) ಯು ಮಾರ್ಚ್ 12ರಿಂದ 14ರವರೆಗೆ ಖರಗ್‌ಪುರದ ಕ್ರೆಸ್ಟ್‌ನಲ್ಲಿ ನಡೆಯಿತು. ತಮ್ಮ ಕರ್ತವ್ಯವನ್ನು ಸಮರ್ಥವಾಗಿ ನಿರ್ವಹಿಸಲು ಸಹಾಯವಾಗಲೆಂದು ಇತ್ತೀಚೆಗೆ ಪ್ರಶಿಕ್ಷಕರಾದವರಿಗೆ ಸಹಜ ಮಾರ್ಗದ ವಿವಿಧ ವಿಷಯಗಳ ಬಗೆಗಿನ ತಿಳುವಳಿಕೆಗಾಗಿ ಒಂದು ಸಭೆಯನ್ನು ಏರ್ಪಡಿಸಲಾಗಿತ್ತು. ಗುರುಗಳು 'ಗೋಪುರ'ದ ಉದ್ಘಾಟನೆ ಮಾಡಿದರು ಮತ್ತು ಬಹಳ ಆರಾಮವಾಗಿ ಕುಳಿತರು ಹಾಗೂ ಅಭ್ಯಾಸಿಗಳು ನಿಧಾನವಾಗಿ ಅವರನ್ನು ಸುತ್ತುವರೆದರು. ಅಭ್ಯಾಸಿಗಳೂ ಸಹ ಬೇರೆ ಸಮಯದಲ್ಲಿ ಗೋಪುರದಲ್ಲಿ ಬಂದು ಕೂರಬಹುದೇ ಎಂಬ ಪ್ರಶ್ನೆಗೆ ಗುರುಗಳು "ಹೌದು, ಇದು ಎಲ್ಲರಿಗಾಗಿ" ಎಂದು ಹೇಳಿದರು. ಅವರು ಆ ಜಾಗದ ಶುಚಿತ್ವ, ಪವಿತ್ರತೆ ಹಾಗೂ ಪರಿಶುದ್ಧತೆಯನ್ನು ಸರಿಯಾಗಿ ನಿರ್ವಹಿಸಬೇಕೆಂದು ಒತ್ತಿಹೇಳಿದರು. ನಂತರ ಗಂಗಾ ಮತ್ತು ಗಣೇಶನ ಮೂರ್ತಿಗಳನ್ನು ನಿಲ್ಲಿಸಬೇಕಾದ ಜಾಗಗಳನ್ನು ತೋರಿಸಿದರು ಹಾಗೂ ಅದಕ್ಕೆ ಬೇಕಾದ ಆಧಾರಗಳ ನಿರ್ಮಾಣದ ಬಗ್ಗೆ ಚರ್ಚಿಸಲಾಯಿತು. ಗುರುಗಳು ಈ ಮೂರ್ತಿಗಳನ್ನು ನಿಲ್ಲಿಸುವುದನ್ನು ನೋಡಲು ಸಾಧ್ಯವಾಗಬೇಕೆಂದು ಮರುದಿನವೇ ಕೆಲಸಕ್ಕೆ ಚಾಲನೆ ನೀಡಲಾಯಿತು.

ಮಾರ್ಚ್ 15ರಿಂದ 21ರವರೆಗೆ ಇರಾನ್‌ನ ಅಭ್ಯಾಸಿಗಳಿಗಾಗಿ ಅಂತರರಾಷ್ಟ್ರೀಯ ಸಮ್ಮೇಳನವನ್ನು ಕ್ರೆಸ್ಟ್ ನಡೆಸಿಕೊಟ್ಟಿತು. ಅವರನ್ನು ಗುರುಗಳೊಂಡಿಗೆ ಕೆಲವು ದಿನ ಕಳೆಯಲು ಹಾಗೂ ಅವರ ಸಾನಿಧ್ಯದಲ್ಲಿರಲು ಆಹ್ವಾನಿಸಲಾಗಿದ್ದಿತು.











ನಗುವಿನಿಂದ ತುಂಬಿ ಬಂದ ಗುರುಗಳು 'ಸಲಾಮ್'ನೊಂದಿಗೆ ಧ್ಯಾನಮಂದಿರಕ್ಕೆ ಪ್ರವೇಶಿಸುತ್ತಾ ಅಲ್ಲಿ ಸತ್ಸಂಗಗಳನ್ನು ಬಹುಮಟ್ಟಿಗೆ ಅವರೇ ನಡೆಸಿಕೊಟ್ಟರು. ಇರಾನ್ ಅಭ್ಯಾಸಿಗಳು ಸಹ ಅದೇ ರೀತಿಯಾಗಿ ಹೃದಯದಿಂದ, ಉತ್ಸಾಹದಿಂದ ಎಲ್ಲರೂ ಒಂದೇ ಧ್ವನಿಯಲ್ಲಿ "ಸಲಾಮ್" ಎನ್ನುತ್ತಿದ್ದರು. ಇರಾನ್‌ನ ಅಭ್ಯಾಸಿಗಳಿಗಾಗಿ ಅನೇಕ ಕಾರ್ಯಕ್ರಮಗಳನ್ನು ನಡೆಸಿಕೊಡಲಾಯಿತು. ಯುವ ಅಭ್ಯಾಸಿಗಳ ಸಭೆ, ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ ಸ್ವತಃ ಗುರುಗಳೇ ಉಪಸ್ಥಿತರಿದ್ದ 30 ಇರಾನ್ ಪ್ರಶಿಕ್ಷಕರಿಗಾಗಿ ಒಂದು ಪ್ರಶಿಕ್ಷಕರ ಸಭೆಯನ್ನು ಆಯೋಜಿಸಲಾಗಿತ್ತು. ದಿನನಿತ್ಯ ಸಾಧನೆಯ ಸ್ವಷ್ಟೀ ಕರಣಕ್ಕಾಗಿ ಒಂದು ಕಾರ್ಯಕ್ರಮ, ಮಹಿಳೆಯ ಮಾತು, ಹತ್ತು ನಿಯಮಗಳು, ಚಾರಿತ್ರ್ಯ ನಿರ್ಮಾಣ ಹಾಗೂ VBSE ಇತ್ಯಾದಿ ವಿಷಯಗಳ ಬಗ್ಗೆ ಚರ್ಚೆಯೂ ನಡೆಯಿತು. ಗುರುಗಳು ಇರಾನ್‌ಗಾಗಿ 5 ಹೊಸ ಪ್ರಶಿಕ್ಷಕರನ್ನು ಸಿದ್ಧಪಡಿಸಿದರು.

ಗುರುಗಳನ್ನು ಭೇಟಿ ಮಾಡಿದ ಇರಾನ್ ಅಭ್ಯಾಸಿಗಳಿಗೆ, ಅದು ಹೊಸ ವರ್ಷದ ಸಂಭ್ರಮವೂ ಆಗಿದ್ದಿತು. ಕೊನೆಯ ಮಂಗಳವಾರ ಹೊಸವರ್ಷದ ಆಚರಣೆಗೆ ಮುನ್ನವೇ "ಚಹರ್ – ಶಾನ್ಬೇ – ಸೂರಿ"ಎಂಬ ಆಚರಣೆಯನ್ನು ಎಲ್ಲರ ಸಂತೋಷಕ್ಕಾಗಿ ನಡೆಸಲಾಯಿತು. ಮೂರು ಸಣ್ಣ ಅಗ್ನಿ ಜ್ವಾಲೆಗಳನ್ನು ಹೊತ್ತಿಸಲಾಗಿತ್ತು, ಡ್ರಮ್‌ಗಳ ತಾಳಕ್ಕೆ ಹಾಗೂ ಹಾಡುಗಳಿಗೆ ಜನರು ಅಗ್ನಿ ಜ್ವಾಲೆಗಳ ಮೇಲೆ ಜಿಗಿದಾಡಿದರು. ಇದಕ್ಕೆ ಸಾಕ್ಷಿಯಂತೆ ಗುರುಗಳು ತಮ್ಮ ಗೋಲ್ಫ್ ವಾಹನದಲ್ಲಿ ಆ ಸ್ಥಳಕ್ಕೆ ಬಂದರು.

20ನೇ ಮಾರ್ಚ್ 'ನವ್‌ರುಝ್' ಎಂದರೆ ಇರಾನಿಯನ್ನರಿಗೆ ಹೊಸ ವರ್ಷ. ಊಟದ ಹಜಾರದಲ್ಲಿ ಒಂದು ಸಾಂಪ್ರದಾಯಿಕವಾದ ರೀತಿಯಲ್ಲಿ ಮೇಜನ್ನು ಸಿದ್ಧಪಡಿಸಿದ್ದರು ಹಾಗೂ ಮೇಜಿನ ಮೇಲಿದ್ದ ಎಲ್ಲ ತಿನಿಸುಗಳ ಬಗ್ಗೆ ಗುರುಗಳಿಗೆ ಒಂದು ಸಣ್ಣ ವ್ಯಾಖ್ಯಾನ ನೀಡಲಾಯಿತು. ಒಂದು ಚಿಕ್ಕ ಸಂಗೀತ ಹಾಗೂ ನೃತ್ಯ ಕಾರ್ಯಕ್ರಮದ ನಂತರ ಇರಾನ್ ಅಭ್ಯಾಸಿಗಳೆ ತಯಾರಿಸಿದ್ದ ಅಡುಗೆಯನ್ನು ಗುರುಗಳು ಮತ್ತು ಅಲ್ಲಿ ನೆರೆದಿದ್ದವರೆಲ್ಲರೂ ಆಸ್ವಾದಿಸಿದರು. ಇರಾನಿಯನ್ನರಿಗೆ ಹೊಸ ವರ್ಷವಾದ್ದರಿಂದ ಅಲ್ಲಿದ್ದವರ ಆಶ್ಚರ್ಯಕ್ಕೆ ರಾತ್ರಿ 10:30ಕ್ಕೆ ಸತ್ಸಂಗವಿದೆ ಎನ್ನುವ ಪ್ರಕಟಣೆಯನ್ನು ಮಾಡಲಾಯಿತು. ಇದರೊಂದಿಗೆ ಆ ದಿನ ಮತ್ತು ಅವರ ಪ್ರವಾಸವು ಪರಿಪೂರ್ಣವಾಯಿತು.

ಮಾರ್ಚ್ 17ರಂದು ಗುರುಗಳು ಗಂಗಾ ಮತ್ತು ಗಣೇಶನ ಮೂರ್ತಿಗಳನ್ನು ನಿಲ್ಲಿಸಿದ್ದನ್ನು ವೀಕ್ಷಿಸಿದರು. ಮಾರ್ಚ್ 21ರಂದು ಅವರು ಕೋಲ್ಕತ್ತಾಗೆ ಹಿಂದಿರುಗಿ ಸಹೋದರ ಅಜಯ್ ಭಟ್ಟರವರ ಮನೆಯಲ್ಲಿ ತಂಗಿದ್ದರು. ಕಣ್ಣೀರಿನಿಂದ ತುಂಬಿದ್ದ ಅಭ್ಯಾಸಿಗಳನ್ನು ಬಿಟ್ಟು ಅವರು ಮಾರ್ಚ್ 24ರಂದು ಚೆನ್ನೈಗೆ ಹೊರಟರು. ಇರಾನಿನ ಅಭ್ಯಾಸಿಗಳು ಕಣ್ಣೀರಿನಿಂದ ತುಂಬಿಕೊಂಡು ತಮ್ಮ ಪ್ರೇಮವನ್ನು ವ್ಯಕ್ತಪಡಿಸಿದರು. ಹಾಗೂ ಗುರುಗಳೊಂದಿಗೆ ಅವರು ಕಳೆದ ಅಮೋಘವಾದ ಒಂದು ವಾರವನ್ನು ತಮ್ಮ ಹೃದಯಗಳಲ್ಲಿ ತುಂಬಿಕೊಂಡು ಹೋದರು.

## ಕರ್ನಾಟಕದ ಅಭ್ಯಾಸಿಗಳ ಸಮ್ಮೇಳನ

ಚೆನ್ನೈಗೆ ಹಿಂದಿರುಗಿ ಬಂದ ಮೇಲೆ ಗುರುಗಳ ಆರೋಗ್ಯ ಅಷ್ಟು ಚೆನ್ನಾಗಿಲ್ಲದಿದ್ದ ಕಾರಣದಿಂದ, ಕಾಟೇಜಿಗೆ ಭೇಟಿ ನೀಡುತ್ತಿದ್ದವರ ಸಂಖ್ಯೆಯನ್ನು ಮಿತಗೊಳಿಸಲಾಗಿತ್ತು. ಆಶ್ರಮದಲ್ಲಿದ್ದ ಅಭ್ಯಾಸಿಗಳು ಭಾನುವಾರ ಸತ್ಸಂಗ ನಡೆಸಿ ಕೊಟ್ಟಾಗ ಅವರನ್ನು ನೋಡಿದರು.

ಏಪ್ರಿಲ್ 2ರಿಂದ 4ರವರೆಗೆ ಕರ್ನಾಟಕದಿಂದ ಸುಮಾರು 3000ಅಭ್ಯಾಸಿಗಳು ಸೇರಿದ್ದರು. ಗುರುಗಳು ಈ ಮೂರು ದಿನಗಳಲ್ಲಿ 5 ಸತ್ಸಂಗಗಳನ್ನು ನಡೆಸಿಕೊಟ್ಟು ಅಭ್ಯಾಸಿಗಳ ಹೃದಯಗಳನ್ನು ತುಂಬಿ ತುಳುಕಾಡುವಂತೆ ಮಾಡಿದರು.

ಮಣಪಾಕ್ಕಂ ಆಶ್ರಮದ ಹೊಸ AMCಯಿಂದ ಇಡಿ ಆಶ್ರಮವನ್ನೇ ಶುದ್ಧ ಮಾಡುವ ದೊಡ್ಡ ಯೋಜನೆಯನ್ನು ಹಮ್ಮಿಕೊಳ್ಳಲಾಗಿತ್ತು. 250 ಶಕ್ತಿಯುತ ಸ್ವಯಂ ಸೇವಕರ ಪಡೆಯು ಆಶ್ರಮದಲ್ಲಿ ಅಲ್ಲಲ್ಲಿ ಬಿದ್ದಿದ್ದ ಅವಶೇಷಗಳ ನಿರ್ಮೂಲನೆ, ಮಾವಿನ ತೋಪು, ಗೊಬ್ಬರ ತಯಾರಿಸುವ ಜಾಗ, ವಾಹನಗಳನ್ನು ನಿಲ್ಲಿಸುವ ಜಾಗ, ಕ್ಯಾಂಟೀನ್ ಹಾಗೂ ಶೌಚಾಲಯಗಳನ್ನು ಸ್ವಚ್ಛ ಮಾಡುತ್ತ ಸೂರ್ಯನಡಿ ಬೆವರು ಹರಿಸಿದರು. ಇದೊಂದು ಅತ್ಯಂತ ದೊಡ್ಡ ಕೆಲಸವಾಗಿದ್ದು ಸ್ವಯಂ ಸೇವಕರು ಬಹಳ ಸಂತೋಷದಿಂದ ಮಾಡಿದರು ಹಾಗೂ ಕೆಲಸದ ವೇಳೆಯಲ್ಲಿ ಅವರ ಉಪಸ್ಥಿತಿಯನ್ನು ಅನುಭವಿಸಬಹುದಾಗಿತ್ತು.

3ನೇ ತಾರೀಖಿನಂದು ಗುರುಗಳು ತಮ್ಮ ಕಾಟೇಜಿನಲ್ಲಿರುವ ಟಿ.ವಿ.ಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ವೀಕ್ಷಿಸಿದರು. ಕಾರ್ಯಕ್ರಮದ ನಂತರ ಭಾಗವಹಿಸಿದ್ದವರನ್ನು ಭೇಟಿಮಾಡಿ ಅವರೊಂದಿಗೆ ಸ್ವಲ್ಪ ಸಮಯ ಕಳೆದರು.

ವಿಜ್ಞಾನ ಮತ್ತು ಮ್ಯಾಜಿಕ್ ಪ್ರದರ್ಶನದಲ್ಲಿ VBSE ಪಠ್ಯಕ್ರಮದ ಅನೇಕ ಪ್ರಯೋಗಗಳನ್ನು ಪುಟಾಣಿಗಳು ತೋರಿಸಿಕೊಟ್ಟರು.

ಏಪ್ರಿಲ್ 4, ಭಾನುವಾರದಂದು ಸತ್ಸಂಗ ನಂತರ ಸಹೋದರ ದೊರೈಸ್ವಾಮಿ ಐಯ್ಯರ್‌ರವರು ತಮ್ಮ ಕೆಲವು ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ತದನಂತರ ಗುರುಗಳು ಪ್ರಾಂತೀಯ ಹಾಗೂ ಭಾಷೆಯ ಸ್ವಪ್ರತಿಷ್ಠೆಗಳನ್ನು ದೂರವಿರಿಸುವ ಬಗ್ಗೆ ಸಂಕ್ಷಿಪ್ತವಾಗಿ ಹೇಳಿದರು.

ನಂತರದ ವಾರವನ್ನು ಗುರುಗಳು ಆಶ್ರಮದಲ್ಲಿ ತಮ್ಮ ವಿಶ್ರಾಂತಿಯಲ್ಲಿ ಕಳೆದರು. 9ರಂದು ಸತ್ಸಂಗದ ನಂತರ ಒಂಭತ್ತು ಮದುವೆಗಳನ್ನು ನಡೆಸಿಕೊಟ್ಟರು. 14ರಂದು ತಮಿಳು ಮತ್ತು ಮಲೆಯಾಳಂ ಹೊಸ ವರ್ಷವಾಗಿದ್ದರಿಂದ ಸತ್ಸಂಗವನ್ನು ನಡೆಸಿಕೊಟ್ಟರು. ಸುಮಾರು 4500 ಸ್ಥಳೀಯ ಅಭ್ಯಾಸಿಗಳು ಸತ್ಸಂಗದಲ್ಲಿ ಭಾಗವಹಿಸಿದರು.

16ರ ಬೆಳಗ್ಗೆ ಕೊಯಮತ್ತೂರ್ ಮಾರ್ಗವಾಗಿ ತಿರುಪ್ಪೂರ್‌ಗೆ ಹೊರಟರು. ಬಾಬೂಜಿ ಮಹಾರಾಜರ ಜನ್ಮದಿನೋತ್ಸವದ ಆಚರಣೆಗಾಗಿ ಅವರು ಏಪ್ರಿಲ್ 29,30 ಹಾಗೂ ಮೇ 1ರಂದು ತಿರುಪ್ಪೂರ್‌ನಲ್ಲಿ ಇರುವರು.

# ಹೊಸ ಪ್ರಕಟನೆಗಳು

## ಹಾರ್ಟ್‌ಸ್ಪೀಕ್ 2009




ಹಾರ್ಟ್‌ಸ್ಪೀಕ್ ಸರಣಿಗೆ ಹೊಸ ಸೇರ್ಪಡೆಯಾದ ಹಾರ್ಟ್‌ಸ್ಪೀಕ್ 2009 ನಲ್ಲಿ ಈ ವರ್ಷಪೂರ್ತಿ ಗುರುಗಳ ಭಾರತದ ಪ್ರವಾಸದಲ್ಲಿನ ಸ್ಫೂರ್ತಿದಾಯಕ ಉಪನ್ಯಾಸಗಳು ಮತ್ತು ಅನೌಪಚಾರಿಕ ಸಂವಾದಗಳು ತುಂಬಿವೆ.

| ಸತ್ಯೋದಯ (ಮರುಮುದ್ರಣ) | ಡೈಲಿ ರಿಫ್ಲೆಕ್ಷನ್ಸ್–ಚೀನೀ |
|---|---|
|  |  |





| ಸಹಜಮಾರ್ಗ ಸಿದ್ಧಾಂತಗಳು–ಆಂಗ್ಲ–ಆವೃತ್ತಿ 1 | ಮಾನವ ವಿಕಸನದಲ್ಲಿ ಗುರುಗಳ ಪಾತ್ರ–ತಮಿಳು |
|---|---|
|  |  |



| ಹತ್ತು ನಿಯಮಗಳ ವ್ಯಾಖ್ಯಾನ–ಮರಾಠಿ | ಪ್ರಿಯತಮ್ ಸೆ ಪ್ರಿಯತಮ್ ತಕ್ ಕಾ ಸಫರ್–ಭಾಗ 2 |
|---|---|
|  |  |





## ತಮಿಳಿನಲ್ಲಿ ಉಪನ್ಯಾಸಗಳ ಎಚಿಪಿ3 ಸಂಗ್ರಹ



ಇದು ತಮಿಳುನಾಡಿನಾದ್ಯಂತ ಮಧುರೈ, ತಿರುಪ್ಪೂರು, ಚೆನ್ನೈ, ತಿರುಚ್ಚಿಯಂತಹ ಸ್ಥಳಗಳಲ್ಲಿ ಗುರುಗಳು ನೀಡಿದ ಉಪನ್ಯಾಸಗಳ ಸಂಕಲನವಾಗಿದೆ. ಇದು ಸರಣಿಯ ಎರಡನೇ ಬಿಡುಗಡೆಯಾಗಿದ್ದು ಇದರಲ್ಲಿ 3 ದಶಕಗಳ ಹಿಂದೆ 1979ನಲ್ಲಿ ನೀಡಿದ ಉಪನ್ಯಾಸವೂ ಶಾಮೀಲಾಗಿದೆ. ಒಟ್ಟಾರೆ ಇದೊಂದು 4 ಘಂಟೆಗಳ ಧ್ವನಿಮುದ್ರಣವಾಗಿದ್ದು, ಅಪೂರ್ವ ಅನೌಪಚಾರಿಕ ಸಂವಾದಗಳು, ಗುರುಗಳು ಅನೇಕ ಪ್ರಶ್ನೆಗಳಿಗೆ ಉತ್ತರಿಸಿರುವ ಪ್ರಶ್ನೋತ್ತರ ಕಾರ್ಯಕ್ರಮಗಳನ್ನು ಒಳಗೊಂಡಿದೆ.

## ಭಾವಚಿತ್ರ ಪ್ರಕಟನೆಯ ಬಿಡುಗಡೆ




### ಬಾಬೂಜಿ– ಚಿತ್ರಸಂಗ್ರಹ ಪುಸ್ತಕ

ಸರಣಿಯ ಮೊದಲ ಪುಸ್ತಕವಾದ ಇದರಲ್ಲಿ ಬಾಬೂಜಿಯವರ ಭಾವಚಿತ್ರಗಳ ಸಂಗ್ರಹವಿದೆ. ಉತ್ಕೃಷ್ಟ ಕಪ್ಪುರಟ್ಟಿನ ಕಾಗದದ ಮೇಲೆ 20 ಚಿತ್ರಗಳಿವೆ.

### ಭಾವಚಿತ್ರಗಳು

ನಮ್ಮ ಗುರುಗಳ ಇತ್ತೀಚಿನ ಚಿತ್ರವೂ ಸೇರಿದಂತೆ ಬಾಬೂಜಿಯವರ 20 ಭಾವಚಿತ್ರಗಳು.

### ಸಂಗ್ರಹಿತ ಮುದ್ರಣ

ಬಾಬೂಜಿ ಮತ್ತು ಗುರುಗಳ ಭಾವಚಿತ್ರಗಳ ಹೊಸ ಸರಣಿ–ಇದರೊಂದಿಗೆ ಅಳತೆ, ಆಧಾರ ಮತ್ತು ಚೌಕಟ್ಟಿನ ಆಯ್ಕೆಯಿದೆ.

## ವಿಬಿಎಸ್‌ಇ ಚಟುವಟಿಕೆಗಳು– ಧಾರವಾಡ

ಮಾರ್ಚ್ 27ರಂದು ಧಾರವಾಡದ ಎಸ್‌ಡಿಎಮ್ ಕೇಂದ್ರ ಶಾಲೆಯಲ್ಲಿ ವಿಬಿಎಸ್‌ಇ ಕಾರ್ಯಕ್ರಮವನ್ನು ನಡೆಸಲಾಯಿತು. ಬೆಂಗಳೂರಿನ ಸೋ.ಆಶಾ ಮತ್ತು ಸೋ.ಮಾಧುರಿಯವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಇಲ್ಲಿ ನಡೆಸಲಾದ ಕಾರ್ಯಕ್ರಮಗಳಲ್ಲಿ ಇದು ಎರಡನೆಯದು.

ಎಸ್‌ಡಿಎಂ ಕೇಂದ್ರಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಾಧನಾರವರು ಆಗಸ್ಟ್ 09ರಂದು ಹುಬ್ಬಳ್ಳಿಯಲ್ಲಿ ಇಂತಹುದೇ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಂತರ ತಮಗಾಗಿ ಒಂದನ್ನು ನಡೆಸಿಕೊಡಬೇಕೆಂದು ನಿವೇದಿಸಿದ್ದರು.

ಕಾರ್ಯಕ್ರಮವು ಮೌಲ್ಯಗಳು, ಮೌಲ್ಯಾಧಾರಣೆಗೆ ಮೂರು ಮಾರ್ಗಗಳು ಮತ್ತು ಮನದ ನಿಯಂತ್ರಣದಂತಹ ವಿಷಯಗಳನ್ನು ಒಳಗೊಂಡಿತ್ತು. ಕೇಳಲಾದ ಪ್ರಶ್ನೆಗಳಿಂದಲೇ ಭಾಗಿಗಳ ಉತ್ಸಾಹ ಅಂದಾಜಿಸಬಹುದಾದ್ದರಿಂದ ಕಾರ್ಯಕ್ರಮಕ್ಕೆ ಉತ್ತಮ ಸ್ವೀಕಾರ ದೊರೆಯಿತು. ಶಾಲೆಯಲ್ಲಿ ಇನ್ನೂ ಇಂತಹ ಕಾರ್ಯಕ್ರಮಗಳು ನಡೆಯಲೆಂದು ಅವರ ಆಶಯ.

## ಸ್ವಯಂಸೇವಕರ ತರಬೇತಿ, ಕಾಕಿನಾಡ, ಆಂ.ಪ್ರ

ಫೆಬ್ರುವರಿ 13,14ರಂದು ಆಂಧ್ರಪ್ರದೇಶದ ಕಾಕಿನಾಡ ಕೇಂದ್ರದಲ್ಲಿ ಎರಡು ದಿನದ ವಲಯಮಟ್ಟದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ವಲಯ ಮುಖ್ಯಸ್ಥರಾದ ಸೋ.ಕೆ.ಮಧುರವರು ಯೋಜಿಸಿದ್ದು, ಕಾಕಿನಾಡ ಕೇಂದ್ರದ ಮುಖ್ಯಸ್ಥ ಸೋ.ಕೋಸೂರಿ ಯದುಸೂರ್ಯರವರು ಕಾರ್ಯರೂಪಕ್ಕೆ ತಂದರು. ಕಾರ್ಯಕ್ರಮದ ವಿಷಯವು ಕೇಂದ್ರದಲ್ಲಿ ನಡೆಯುವ ಚಟುವಟಿಕೆಗಳಿಗನುಸಾರವಾಗಿ ಸ್ವಯಂಸೇವಕರ ಸಂಖ್ಯೆಯಲ್ಲಿ ಹೆಚ್ಚಳ ತರುವುದಾಗಿತ್ತು. ಇದರಿಂದ ಮಿಷನ್ನಿನ ಉದ್ದೇಶವನ್ನು ಎಲ್ಲರಲ್ಲೂ ಮೂಡಿಸಲು ಸಹಾಯಕವಾಗುವುದು. ಎರಡು ದಿನಗಳ ಕಾರ್ಯಕ್ರಮವು ವಿಬಿಎಸ್‌ಇ ಶಿಕ್ಷಕ ತರಬೇತಿ ಕಾರ್ಯಕ್ರಮದಿಂದ ಪ್ರೇರಿತವಾಗಿದ್ದು, ಮುಕ್ತಸಭೆಗಳು ಮತ್ತು ಗೃಹಕೂಟಗಳನ್ನು ನಡೆಸಲಾಯಿತು. ಮಕ್ಕಳ ಚಟುವಟಿಕೆಗಳಿಗಾಗಿ ಚಿತ್ರ ಬಿಡಿಸುವ ವಿವರಪಟ್ಟಿ, ವೈಜ್ಞಾನಿಕ ವಿಧಾನಗಳು, ನಾಯಕತ್ವ, ಆಟಗಳು ಇತ್ಯಾದಿಗಳಿಗಾಗಿ ವೇಳಾಪಟ್ಟಿಯನ್ನು ರಚಿಸಲಾಯಿತು. ಸುಮಾರು 150ಕ್ಕಿಂತ ಹೆಚ್ಚು ಅಭ್ಯಾಸಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಉತ್ಸಾಹದಿಂದ ಸ್ವೀಕರಿಸಲಾಯಿತು.







## ರೇಡಿಯೊ ಪ್ರಸಾರ

ಕರ್ನಾಟಕದ ತುಮಕೂರಿನ ರೇಡಿಯೋ ಸಿದ್ದಾರ್ಥವು ಏಪ್ರಿಲ್ 17 ರಂದು ಸಹಜಮಾರ್ಗ ಧ್ಯಾನಪದ್ಧತಿಯ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸಂದರ್ಶನವೊಂದನ್ನು ಆಯೋಜಿಸಿತ್ತು. ಬೆಂಗಳೂರು ಕೇಂದ್ರದ ಸೋ.ವಸಂತಕುಮಾರಿಯವರು 40 ನಿಮಿಷಗಳ ಕಾಲ ಕನ್ನಡದಲ್ಲಿ ಪ್ರಶ್ನೆಗಳಿಗೆ ಉತ್ತರಿಸಿದರು. ಸಹಜಮಾರ್ಗವು ಹೇಗೆ ವ್ಯಕ್ತಿಯೊಬ್ಬನಿಗೆ ಲಾಭದಾಯಕ, ಆಂತರಿಕ ಬದಲಾವಣೆಗೆ ಧ್ಯಾನದ ಅಗತ್ಯ, ಸಂತುಲಿತ ಜೀವನ, ಸಹಜಮಾರ್ಗದ ಮುಖ್ಯ ಗುರಿ ಮತ್ತು ಗುರುಗಳ ಪಾತ್ರ ಮುಂತಾದ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ರೇಡಿಯೋ ಸಿದ್ದಾರ್ಥವು ಎಸ್‌ಎಸ್‌ಐಟಿ ವಿದ್ಯಾಲಯದಲ್ಲಿ ನಡೆಸುವ ಸಾಮಾಜಿಕ ಎಫ್‌ಎಂ ವಾಹಿನಿಯಾಗಿದೆ ಹಾಗೂ ನಿತ್ಯ ಸಂಜೆ 6ಘಂಟೆಯಿಂದ 8ಘಂಟೆಯವರೆಗೆ ಸ್ಥಳೀಯರಿಗೆ ಅನುಕೂಲಕರವಾಗಿ ಪ್ರಸಾರವಾಗುತ್ತದೆ.

## ಹೊಸ ಪ್ರಶಿಕ್ಷಕರ ತರಬೇತಿ ಕಾರ್ಯಕ್ರಮ

ಮಾರ್ಚ್ 12–14ರಂದು ಖರಗ್ಪುರದ ಕ್ರೆಸ್ಟ್‌ನಲ್ಲಿ ಹೊಸ ಪ್ರಶಿಕ್ಷಕರ ಎರಡನೇ ತಂಡಕ್ಕೆ ತರಬೇತು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಪ್ರತಿನಿತ್ಯ ಮುಂಜಾನೆ 6ಘಂಟೆಗೆ ಸಮೂಹಚರ್ಚೆಯಿಂದ ಪ್ರಾರಂಭವಾಗಿ ನಂತರ ಸತ್ಸಂಗ ಮತ್ತು ಉಪಾಹಾರವಿರುತ್ತಿತ್ತು. ಒಂಭತ್ತು ಘಂಟೆಯ ಸಭೆಯಲ್ಲಿ ಪಿಸುಮಾತುಗಳು ಪುಸ್ತಕದಿಂದ ಆಯ್ದ ಭಾಗಗಳ ಉಲ್ಲೇಖದ ನಂತರ ಉಪನ್ಯಾಸಗಳು ನಡೆಯುತ್ತಿದ್ದವು. ಭೋಜನ ಮತ್ತು ವಿಶ್ರಾಂತಿಯ ನಂತರ ಧನಾತ್ಮಕ ಚಿಂತನೆ, ಆಂತರಿಕ ಮಾರ್ಗದರ್ಶನವನ್ನು ಅನುಸರಿಸುವುದು ಮತ್ತು ಆಪ್ತಸಲಹೆ ಹಾಗೂ ಉಪದೇಶಗಳಿಂದ ದೂರವಿರುವ ಅಗತ್ಯ ಮುಂತಾದ ವಿಷಯಗಳ ಬಗ್ಗೆ ಸಮೂಹಚರ್ಚೆ ನಡೆಸಲಾಯಿತು.

ಎರಡನೇ ತಂಡದ ನಾವೀನ್ಯತೆಯೆಂದರೆ ಇದರಲ್ಲಿ 70ರ ದಶಕದಲ್ಲಿ ಬಾಬೂಜಿಮಹಾರಾಜರೊಂದಿಗೆ ಸಹಜಮಾರ್ಗ ಸೇರಿದ ಪಶ್ಚಿಮದ ನಾಲ್ಕು ಉಪನ್ಯಾಸಕರಿದ್ದರು. 'ಸಹಜಮಾರ್ಗ–ಜೀವನದ ವಿಧಾನ' ಎಂಬ ವಿಷಯದ ಬಗ್ಗೆ ಜರ್ಮನಿಯ ಡೋರಿಟ್ ವಾರ್ನಿಂಗ್‌ರವರು ಮಾತನಾಡಿದ ನಂತರ ಅಲ್ಮೋರಾದ ಶುಫಾಲ್ ಭುಪೇಂದ್ರರವರು 'ಪ್ರಶಿಕ್ಷಕರ ಕಾರ್ಯಗಳು' ಎಂಬುದರ ಬಗ್ಗೆ ಮಾತನಾಡಿದರು. ಎರಡನೇ ದಿನದಂದು ಸೋ. ಅಜಯ್ ಭಟ್ಟರ್‌ರವರು 'ಪ್ರಶಿಕ್ಷಕರ ಪಾತ್ರ ಮತ್ತು ಜವಾಬ್ದಾರಿ' ಕುರಿತು ಮಾತನಾಡಿದ ನಂತರ ಇಟಲಿಯ ಫ್ರಾಸ್ಕೋ ರಸ್ಕೋರವರು 'ಪೂಜ್ಯತೆಯ ಮನೋವೃತ್ತಿ' ಕುರಿತು ಮಾತನಾಡಿದರು. ಮೂರನೇ ದಿನದಂದು ಮ್ಯೂನಿಕ್‌ನ ಓಟ್ಟೋ ರೇಶೆನೆಡರ್‌ರವರು 'ಪ್ರೇಮ ಮತ್ತು ಶರಣಾಗತಿಯ ಮನೋವೃತ್ತಿ' ಬಗ್ಗೆ ಮಾತನಾಡಿದರು. ಕೆನಡಾದ ಕ್ರಿಸ್ಟೀನ್ ಪ್ರೆಲೆಂಡ್‌ರವರು 'ಪ್ರಶಿಕ್ಷಕರಾಗಿ ನಾನು ಕಲಿತದ್ದು' ಬಗ್ಗೆ ಬಾಬೂಜಿಮಹಾರಾಜರು ಮತ್ತು ಪೂಜ್ಯ ಗುರುಗಳೊಂದಿಗಿನ ಅವರ ಪಾರಸ್ಪರಿಕ ಚರ್ಚೆಗಳನ್ನು ಕಥಾರೂಪದಲ್ಲಿ ವರ್ಣಿಸಿದರು. ಅಂತಿಮ ಉಪನ್ಯಾಸವನ್ನು ಕಾರ್ಯಕ್ರಮದ ಆಯೋಜಕರಾದ ತಿರುಪ್ಪೂರಿನ ಸೋ. ಎನ್.ಪ್ರಕಾಶ್‌ರವರು 'ಅವರನ್ನು ಅನುಸರಿಸು' ಬಗ್ಗೆ ನೀಡಿದುದು ಹಿಂದಿನ ಮೂರು ದಿನದ ಕಾರ್ಯಕ್ರಮದ ಸಾರವನ್ನು ತುಂಬಿಕೊಂಡಿದ್ದಲ್ಲದೆ ಗುರುಗಳನ್ನು ಅನುಸರಿಸುವುದರಿಂದ ಆಗಬಲ್ಲ ಭವಿಷ್ಯದ ಕಾರ್ಯಗಳ ಬಗ್ಗೆ ಗಮನ ಹರಿಸಲು ಸಾಧ್ಯವಾಯಿತು. ಭವಿಷ್ಯದಲ್ಲಿ ತರಬೇತಿ ಕಾರ್ಯಕ್ರಮಗಳು ಭಾರತದ ವಿವಿಧ ಭಾಗಗಳಲ್ಲಿ ನಡೆಯುವವು.

## 'ಭಯೋತ್ಪಾದನೆಯ ತಿಳುವಳಿಕೆ ಮತ್ತು ಪ್ರತಿಕ್ರಿಯೆ'

ಪೂಜ್ಯ ಗುರುಗಳು ಜಂಟಿ ಕಾರ್ಯದರ್ಶಿ ಸೋ. ಎ.ಪಿ.ದೊರೈ ಮತ್ತು ದಕ್ಷಿಣ ಕರ್ನಾಟಕದ ವಲಯಮುಖ್ಯಸ್ಥರಾದ ಸೋ. ಶರತ್ ಹೆಗಡೆಯವರನ್ನು 'ಭಯೋತ್ಪಾದನೆಯ ತಿಳುವಳಿಕೆ ಮತ್ತು ಪ್ರತಿಕ್ರಿಯೆ' ಎಂಬ ವಿಷಯದ ಬಗ್ಗೆ ನಡೆದ ಸಭೆಯಲ್ಲಿ SRCM ನ್ನು ಪ್ರತಿನಿಧಿಸಲು ನಿಯೋಜಿಸಿದ್ದರು. ಇದನ್ನು ಬೆಂಗಳೂರಿನ ಎಕ್ಯುಮೆನಿಕಲ್ ಕ್ರಿಶ್ಚಿಯನ್ ಸೆಂಟರ್(ECC) ಯು ಫೆಬ್ರುವರಿ 222–24ವರೆಗೆ ಆಯೋಜಿಸಿತ್ತು. ಇದು ದೇಶದ ನಾನಾ ಭಾಗಗಳಿಂದ ಬಂದ ಮತ್ತು ವಿಭಿನ್ನ ಮತದ ಹಿನ್ನೆಲೆಯ ಜನರನ್ನು ಒಟ್ಟುಗೂಡಿಸಿ ಈ ವಿಷಯದ ಬಗ್ಗೆ ಅವರ ಅಭಿಪ್ರಾಯ ವ್ಯಕ್ತ ಪಡಿಸಲು ಅನುವಾಯಿತು. ಅನೇಕ ವಿಭಾಗಗಳ ವಿಶೇಷಜ್ಞರು ತಮ್ಮ ವಿಚಾರಗಳನ್ನು ಹಂಚಿಕೊಳ್ಳಲು ಆಮಂತ್ರಿಸಲ್ಪಟ್ಟಿದ್ದರು ಮತ್ತು ಸಮೂಹಚರ್ಚೆ ನಡೆಸಲಾಯಿತು.

ECC ಯ ನಿರ್ದೇಷಕರಾದ ಡಾ. ಮಣಿ ಚಾಕೋರವರು ಉದ್ಘಾಟನೆಯ ವೇಳೆಯಲ್ಲಿ ಜಾಗತಿಕ ನೀತಿತತ್ವಗಳಿಗಾಗಿ ಪ್ರಯತ್ನ ಪಡುವ ಅಗತ್ಯ ಮತ್ತು ಧರ್ಮದಾಚೆಯ ನೋಟದ ಬಗ್ಗೆ ಮಾತನಾಡಿದರು. ICSA ಯ ನಿರ್ದೇಶಕರಾದ ಡಾ.ಮೋಸಸ್ ಮನೋಹರ್‌ರವರು ಲಘು ಪರಿಚಯ ನೀಡಿ, ಸಮಸ್ಯೆಯ ಕಡೆ ಹೊಸನೋಟ ಬೀರುವ ಅಗತ್ಯ, ಸರ್ಕಾರವು ಸೂಕ್ಷ್ಮವಾಗಿ ಗಮನ ಹರಿಸುವ ಅಗತ್ಯ ಹಾಗೂ ಧಾರ್ಮಿಕ ಸಂಘಟನೆಗಳು ಜನರಿಗೆ ತಿಳಿಸಿಕೊಡುವ ಅಗತ್ಯದ ಕುರಿತು ಮಾತನಾಡಿದರು. ಸೋ. ದೊರೈರವರು ಚರ್ಚೆಯಲ್ಲಿ ಹೇಗೆ ನಾವು ಧರ್ಮದಾಚೆ ಆಧ್ಯಾತ್ಮಕ್ಕೆ ಉನ್ನತಿ ಹೊಂದಬೇಕು, ಹೇಗೆ ಒಬ್ಬ ವ್ಯಕ್ತಿಯಲ್ಲಿ ಬದಲಾವಣೆ ತರುವ ಮೂಲಕ ಇಡಿಯ ಸಮಾಜದಲ್ಲಿ ಮಾರ್ಪಾಟು ತರಬಹುದು ಎಂಬುದನ್ನು ತಿಳಿಸಿ ಹೇಳಿದರು.

ಈ ಸಭೆಯ ಬಹುಪಾಲು ಭಾಗಿಗಳು ಸಂತೋಷಗೊಂಡರೂ ಕೆಲವು ಆಳವಾದ ಧಾರ್ಮಿಕ ಹಿನ್ನೆಲೆಯುಳ್ಳ ಜನರ ಮೇಲೆ ಪರಿಣಾಮ ಬೀರದೇಹೋಯಿತು.



## ಸೋದರಿಯರಿಗಾಗಿ ಕಮ್ಮಟ



21ನೇ ಮಾರ್ಚ್‌ರಂದು ಇಂದೋರ್ ಕೇಂದ್ರದಲ್ಲಿ ಅಭ್ಯಾಸಿಸೋದರಿಯರಿಗಾಗಿ ವಿಶೇಷ ಅರ್ಧ ದಿನದ ಕಮ್ಮಟವೊಂದನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ವಿಷಯವು 'ಅಭ್ಯಾಸಿ ಸೋದರಿಯರ ವಿವಿಧ ಪಾತ್ರಗಳೊಂದಿಗೆ ಸಾಧನೆಯನ್ನು ಸರಿತೂಗಿಸುವುದು' ಎಂದಾಗಿತ್ತು. ಇಂದೋರ್ ಮತ್ತು ಹತ್ತಿರದ ಕೇಂದ್ರಗಳಿಂದ ಸುಮಾರು 100 ಅಭ್ಯಾಸಿಗಳು ಪಾಲ್ಗೊಂಡಿದ್ದರು. ಸೋ.ವಿಜಯಾ ದೇಶಪಾಂಡೆಯವರು ನಮ್ಮಲ್ಲಿ ಗಂಡಸರು ಮತ್ತು ಹೆಂಗಸರಿಬ್ಬರಿಗೂ ಒಂದೇ ಸಾಧನಾ ಪದ್ಧತಿಯಿದ್ದು ಪರಮಗುರಿಯಲ್ಲಿ ಸೇರುವುದು ಆದೇ ಆತ್ಮವಾದರೂ ಈ ಭೂಮಿಯಲ್ಲಿ ಎರಡೂ ಜಾತಿಯ ಪಾತ್ರಗಳು ಬೇರೆ ಎಂದು ವಿವರಿಸಿದರು. ನ್‌ಮ್ಮ ಪೂಜ್ಯ ಗುರುಗಳು ಅದನ್ನೇ ಹೇಗೆ ಬೇರೆ ರೀತಿಯಲ್ಲಿ ನಿಭಾಯಿಸಬೇಕೆಂದು ನಮ್ಮಿಂದ ಆಶಿಸುತ್ತಾರೆಂಬುದನ್ನು ತಿಳಿದುಕೊಳ್ಳುವುದು ಅವಶ್ಯ. ಸೋದರಿಯರು ಗೃಹಿಣಿ, ಶಿಕ್ಷಕಿ, ವೈದ್ಯ ಅಥವಾ ಮ್ಯಾಜಿಸ್ಟ್ರೇಟ್ ಆಗುವ ಜೊತೆಗೆ ಸಾಧನೆಯನ್ನು ಮಾಡುವ ತಮ್ಮ ಅನುಭವಗಳನ್ನು ಹಂಚಿಕೊಂಡರು.

ಕಮ್ಮಟದ ದ್ವಿತೀಯಾರ್ಧದಲ್ಲಿ ಸೋದರಿಯರಿಗಾಗಿ ಅವರ ಸಾಧನೆಯಲ್ಲಿ ಉಂಟಾಗುವ ಯಾವುದೇ ರೀತಿಯ ತೊಂದರೆಗಳನ್ನು ತಿಳಿಯಲು ಸಮೂಹಚರ್ಚೆಯನ್ನು ನಡೆಸಲಾಯಿತು.

## ಪ್ರಕಟನಾ ವಿಭಾಗದ ಸಂದೇಶ

ಅಭ್ಯಾಸಿಗಳು ಗುರುಗಳ ಔಪಚಾರಿಕ/ಅನೌಪಚಾರಿಕ ಉಪನ್ಯಾಸಗಳನ್ನು ಲಿಖಿತರೂಪದಲ್ಲಿ ಈಮೇಲ್ ಮೂಲಕ ಕಳಿಸುತ್ತಿದ್ದು ಅದು ಸರಣಿಯಲ್ಲಿ ರವಾನೆಯಾಗುತ್ತಿರುವುದು ಗಮನಕ್ಕೆ ಬಂದಿದೆ. ಇಂತಹ ವಿಷಯವು ದೋಷಪೂರಿತವಾಗಿದ್ದು, ಅದರಲ್ಲಿ ಅಕ್ಷರಶಃ ಗುರುಗಳು ಹೇಳಿದ ವಿಷಯವಿಲ್ಲದೆ ಅವರವರ ದೃಷ್ಟಿಕೋನ ಮತ್ತು ವಿಚಾರಧಾರೆಯಂತೆ ಇರುವುದರಿಂದ ನಮ್ಮ ಸಂಸ್ಥೆಗೆ ಇದು ಅಪಾಯ.

ಇಂತಹ ವಿಷಯಗಳ ಅನಧಿಕೃತ ವರದಿ ರವಾನೆಗೆ ಅನುಮತಿಯಿಲ್ಲವೆಂಬುದು ದಯವಿಟ್ಟು ಗಮನಿಸಿ. ಇಂತಹ ಅನಧಿಕೃತ ವರದಿಗಳ ರವಾನೆಯನ್ನು ನಿಲ್ಲಿಸಿ ಮತ್ತು ತಡೆಯಿರಿ ಎಂದು ದಯವಿಟ್ಟು ಎಲ್ಲಾ ಅಭ್ಯಾಸಿಗಳಲ್ಲಿ ವಿನಂತಿ. ಯಾವುದೇ ಅನಧಿಕೃತ ಚಟುವಟಿಕೆಗಲು ನಿಮ್ಮ ಗಮನಕ್ಕೆ ಬಂದಲ್ಲಿ ಅದನ್ನು publications.print@srcm.org ಗೆ ಕಳುಹಿಸಬಹುದು.

ಗುರುಗಳ ಉಪನ್ಯಾಸಗಳ ಅಧಿಕೃತ ಭಾಷಾಂತರವು ಸಮಾರಂಭದ ಕೆಲವೇ ದಿನಗಳಲ್ಲಿ ಮಿಷನ್ನಿನ ವೆಬ್‌ಸೈಟಿನಲ್ಲಿ ಪ್ರಕಟಗೊಳ್ಳುವುದು. ಯಾವುದೇ ಕಾರಣಕ್ಕಾಗಿ ಇವು ಸಕಲರಿಗೆ ಉಪಲಬ್ಧ.

## ಗತಕಾಲಕ್ಕೊಂದು ಇಣುಕುನೋಟ




ಪೂಜ್ಯ ಬಾಬೂಜಿ ಮಹಾರಾಜರು 1960–1965 ಅವಧಿಯಲ್ಲಿ ಭಾರತಾದ್ಯಂತ ಪಯಣಿಸಿದರು. 1960–65ವರೆಗಿನ ಅವರ ಪ್ರಯಾಣದ ಕಾರ್ಯಕ್ರಮಗಳನ್ನು 'ಸಹಜ ಮಾರ್ಗ'ಪತ್ರಿಕೆಯಲ್ಲಿ ಅವರು ಭೇಟಿ ನೀಡಬೇಕಿದ್ದ ಸ್ಥಳಗಳ ಸಮೇತ ನಮೂದಿಸಲಾಗಿದೆ– ದೆಹಲಿ, ವಿಜಯವಾಡ, ಹೈದರಾಬಾದ್, ಬೀದರ್, ಸೇಡಂ, ಗುಲ್ಬರ್ಗಾ, ಬಿಜಾಪುರ, ಹಾಸನ, ಮೈಸೂರು, ಬೆಂಗಳೂರು, ತಿರುವಣ್ಣಮಲೈ, ತಿರುಚ್ಚಿ, ತಿರುಪತಿ, ಕಡಪ, ಚೆನ್ನೈ, ಭೋಪಾಲ್, ಒರೈ ಮತ್ತು ಲಖನೌ.

ಈ ಪಯಣ ಕಾಲದಲ್ಲಿ ಬಾಬೂಜಿ ಮಹಾರಾಜರು ಅನೇಕ ಉಪನ್ಯಾಸಗಳನ್ನು ನೀಡಿದ್ದಾರೆ. ಆಯ್ದ ಕೆಲವು ತುಣುಕುಗಳನ್ನು ಈ ಕೆಳಗೆ ನೀಡಲಾಗಿದೆ.

### ಸೆಪ್ಟೆಂಬರ್ 1960

"ಆಧ್ಯಾತ್ಮದಲ್ಲಿ ಮಧ್ಯಮತೆ ಅತ್ಯಂತ ಮುಖ್ಯವಾದುದು. ಈ ಶಬ್ದವು ವಿಶಾಲಾರ್ಥವನ್ನು ಕೊಡುತ್ತದೆ. ಅದು ನಮ್ಮ ಜೀವನದ ಬಾಹ್ಯ ರೀತಿಗಳನ್ನು ಇತರರು ಸ್ವೀಕರಿಸುವಂತೆ ಸುಧಾರಿಸುವುದಷ್ಟೇ ಅಲ್ಲದೆ ಇದು ನಮ್ಮ ಮಾನಸಿಕ ಮತ್ತು ದೈಹಿಕ ಚಟುವಟಿಕೆಗಳೆಲ್ಲವನ್ನೂ ತಿಳಿಸುತ್ತದೆ."

ಮೂಲ: 'ಮೆಸೇಜಸ್ ಯೂನಿವರ್ಸಲ್', 'ಮೆಸೇಜಸ್ ಆಫ್ ಮೈ ಮಾಸ್ಟರ್'

### ಮಾರ್ಚ್ 1962, ಹೋಳಿಯಂದು ಬಾಬೂಜಿಯವರ ಸಂದೇಶ

"ಮರುಳನಂತೆ ಗುರಿಯನ್ನು ಬೆನ್ನತ್ತುವವನಿಗೆ ಮಾತ್ರ ಅದು ಲಭ್ಯವಾಗುತ್ತದೆ. ಇದೊಂದೇ ದಾರಿ ಹಾಗೂ ಈ ವಿಧಾನವನ್ನು ಯಾರೇ ಅನುಸರಿಸಿದರೂ ಅವರಿಗೆ ಯಶಸ್ಸು ಕಟ್ಟಿಟ್ಟ ಬುತ್ತಿ. ಆದರೆ ಅದಕ್ಕಾಗಿ ನಿಮ್ಮ ಹೃದಯದಲ್ಲಿ 'ನೋವನ್ನು' ಸೃಷ್ಟಿಸಿಕೊಳ್ಳಬೇಕು. ನೋವಿದ್ದಲ್ಲಿ ಅದಕ್ಕೆ ಮದ್ದೂ ಇರಬೇಕು. ಎಲ್ಲಾ ವಿಧಾನಗಳು ಮತ್ತು ಸಾಧನೆಗಳ ಗುರಿ ಅದೇ."

"ನಡೆಯುವ ಕೃತ್ಯಗಳೆಲ್ಲವೂ ಭಗವಂತನ ಇಚ್ಛೆಯ ಮೇರೆಗೆ ನಡೆಯುತ್ತದೆ. ಎಂದು ಅದನ್ನು ನಾವು ನಮ್ಮ ಇಚ್ಛೆ ಅಥವಾ ಕೃತ್ಯಗಳ ಪರಿಣಾಮವು ಇದೆಂದು ಭಾವಿಸತೊಡಗುತ್ತೇವೋ ಆಗಲೇ ಬರುವುದು ವಿಪತ್ತು. ನಾವು ಜಯವನ್ನು ಸಂತೋಷದಿಂದ ಮತ್ತು ಅಪಜಯವನ್ನು ದುಃಖದಿಂದ ಸ್ವೀಕರಿಸಲು ಇದಷ್ಟೇ ಕಾರಣ. ಇದರಿಂದಲೇ ನಾವು ಬಂಧನಕ್ಕೆ ಸಿಲುಕುತ್ತೇವೆ. ಈ ಅಹಂಭಾವದ ಅನುಪಸ್ಥಿತಿಯು ನಿಜವಾದ ಸಾಮರ್ಥ್ಯದ ಆಗಮನ. ಇದನ್ನು ಹೇಗೆ ಸಾಧಿಸುವುದು? ಅದ್ಭುತ ದಿವ್ಯಶಕ್ತಿಯೊಂದಿಗೆ ನಮ್ಮನ್ನು ಜೋಡಿಸಿಕೊಂಡರೆ ಮಾತ್ರ ಸಾಧ್ಯ. ಹಾಗೆ ಮಾಡುವುದರಿಂದ ಹಂತಹಂತವಾಗಿ ಅವರಿಗೆ ಹತ್ತಿರವಾಗುವ ತನಕ ನಡೆಯುತ್ತೇವೆ."

"ಕೆಲವರು ಕೇವಲ ತಮ್ಮ ಮನ ಹಗುರಗೊಳಿಸಲೆಂದು ನನ್ನ ಬಳಿ ಕುಳಿತುಕೊಳ್ಳಬಹುದು. ಕೆಲಕಾಲ ಅವರಿಗೆ ಆರಾಮ ದೊರಕಿದರೆ ನನ್ನ ಬಳಿಯೂ ಅವರಿಗೆ ಕೊಡತಕ್ಕದ್ದೇನೋ ಇದೆಯೆಂದು ನನಗೂ ಸಮಾಧಾನ. ಆದರೆ ಅದೊಂದೇ ಸಾಕಾಗದು. ಹಾಗೇ ಕೆಲವರ ಸ್ನೇಹ ಮತ್ತು ಸಹಚರತ್ವಕ್ಕಾಗಿ ನನ್ನ ಸಂಗ ಬಯಸಬಹುದು, ಆದರೆ ಜ್ಞಾನೋದಯಕ್ಕಾಗಿ ಮಾತ್ರ ಅಲ್ಲ. ಇದು ನನ್ನ ಪಾಲಿಗೆ ತುಂಬಾ ಸಣ್ಣ ವಿಷಯ ಏಕೆಂದರೆ ತನ್ನ ಹೃದಯದಲ್ಲಿ ನನ್ನ ಮೇಲಿನ ಪ್ರೇಮವುಳ್ಳ ಯಾರನ್ನು ಕಂಡರೂ ನಾನು ಉಲ್ಲಾಸದೊಂದಿಗೆ ಅತ್ಯಂತ ಸಂತಸಗೊಳ್ಳುತ್ತೇನೆ. ಆದರೆ ತನಗೆ ಪ್ರೇಮಿಸಲು, ಇಷ್ಟಪಡಲು ಇಷ್ಟೊಂದು ಇರುವಾಗ ಯಾರಾದರೂ ಅದರ ಬಗ್ಗೆ ನನ್ನ ಸಲುವಾಗಿ ಏಕೆ ಚಿಂತಿಸಬೇಕು? ಯಾರು ತನ್ನನ್ನೇ ಕಳೆದುಕೊಳ್ಳುತ್ತಾನೋ ಅಥವಾ ಕನಿಷ್ಟ ಕಳೆದುಕೊಳ್ಳಲು ಬಯಸುತ್ತಾನೋ ಅವನೇ ಬಹುಶಃ ನನ್ನೆಡೆ ವಾಲಿರುತ್ತಾನೆ. ನನ್ನ ಮನಸ್ಸಿನ ಪ್ರವೃತ್ತಿ ತುಸು ವಿಚಿತ್ರ. ನನ್ನನ್ನು ನಾನು ಪೂರ್ಣ ಕಳೆದುಕೊಂಡು, ಬೇರೆಯವರು ನನ್ನನ್ನು ಹುಡುಕಲೆಂದು ಬಯಸುತ್ತೇನೆ."

ಮೂಲ: 'ಸಹಜಮಾರ್ಗ' ಪತ್ರಿಕೆ, ಜುಲೈ 1964

ಶ್ರೀ ರಾಮಚಂದ್ರ ಮಿಷನ್®
ಎಬೋಸ್ ಇಂಡಿಯಾ ವಾರ್ತಾಪತ್ರ

# ಪ್ರಬಂಧ ಬರಹ ಸ್ಪರ್ಧೆ 2009
# ಪ್ರಮಾಣಪತ್ರ ಹಂಚಿಕೆ

ಅಂತರರಾಷ್ಟ್ರೀಯ ಯುವದಿನಂದು ಸಂಯುಕ್ತ ರಾಷ್ಟ್ರಗಳ ಮಾಹಿತಿ ಕೇಂದ್ರದ (ಭಾರತ ಮತ್ತು ಭೂತಾನ್) ಸಹಯೋಗದೊಂದಿಗೆ ಶ್ರೀ ರಾಮಚಂದ್ರ ಮಿಷನ್ 2009ರಲ್ಲಿ ಆಯೋಜಿಸಿದ್ದ ಪ್ರಬಂಧಸ್ಪರ್ಧೆಯು ಮಕ್ಕಳಿಗೆ ಮತ್ತು ಅವರ ಮೂಲಕ ಅವರ ಕುಟುಂಬದವರಿಗೆ ಗುರುಗಳ ಸಂದೇಶ ತಲುಪಿಸಲು ಸಹಾಯಕಾರಿಯಾಯಿತು. ಪ್ರಬಂಧಗಳ ರಾಶಿಯನ್ನು ಓದಿ ಅವುಗಳಲ್ಲಿ ಉತ್ಕೃಷ್ಟವಾದವುಗಳನ್ನು ಆಯುವುದೇ ಬೃಹತ್ ಕಾರ್ಯವಾಗಿತ್ತು. ಭಾರತಾದ್ಯಂತ ಸ್ವಯಂಸೇವಕರು ಈ ಕಾರ್ಯ ಕೈಗೊಂಡು ರಾಷ್ಟ್ರೀಯ, ವಲಯ ಮತ್ತು ಶಾಲಾಮಟ್ಟದಲ್ಲಿ ಪ್ರಬಂಧಗಳನ್ನು ಆಯ್ದರು. ಪ್ರಮುಖ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಶ್ರೇಷ್ಠ ಪ್ರಬಂಧಗಳನ್ನು ಪ್ರೋತ್ಸಾಹಿಸಲು ಪ್ರಮಾಣಪತ್ರಗಳನ್ನು ಹಂಚಲಾಯಿತು. ಇದರಿಂದ ಕೇಂದ್ರಗಳಿಗೆ ವಿದ್ಯಾರ್ಥಿಗಳು, ಅವರ ಪಾಲಕರು ಮತ್ತು ಶಾಲಾ ಸಿಬ್ಬಂದಿಗೆ ಪ್ರಬಂಧ ಸ್ಪರ್ಧೆಯ ಹಿಂದಿನ ಮಿಷನ್ನಿನ ತತ್ವಗಳ ಬಗ್ಗೆ ತಿಳಿಸಿಕೊಡಲು ಅವಕಾಶ ದೊರಕಿತು. ಪಾಲಕರು ಮತ್ತು ಶಿಕ್ಷಕರು ಈ ಸ್ಪರ್ಧೆಯ ಮೂಲಕ ತಮ್ಮ ಮಕ್ಕಳಲ್ಲಿ ಮೌಲ್ಯವನ್ನು ತುಂಬುವ ಮಿಷನ್ನಿನ ಯತ್ನದ ಬಗ್ಗೆ ಸಂತಸ ವ್ಯಕ್ತಪಡಿಸಿದರು. ಅನೇಕರು ಸಹಜಮಾರ್ಗ ಪದ್ಧತಿಯಿಂದ ಪ್ರಭಾವಿತರಾಗಿ ಇನ್ನಷ್ಟು ತಿಳಿದುಕೊಳ್ಳಲು ಮತ್ತು ಸೇರಲು ಇಚ್ಛಿಸಿದರು. ಈ ಕಾರ್ಯಕ್ರಮದಿಂದ ಅನೇಕರಿಗೆ ತಮ್ಮ ಶಕ್ತ್ಯಾನುಸಾರ ಮಿಷನ್ನಿನ ಪರವಾಗಿ ಕೆಲಸ ಮಾಡಲು ಅವಕಾಶ ದೊರಕಿತು.

ಈ ಕೆಳಗೆ ಭಾರತದ ಉದ್ದಗಲಕ್ಕೂ ಹಬ್ಬಿದ ಕೇಂದ್ರಗಳಲ್ಲಿ ನಡೆದ ಪ್ರಮಾಣಪತ್ರ ಹಂಚಿಕೆ ಕಾರ್ಯಕ್ರಮಗಳ ಬಗ್ಗೆ ವರದಿ ಮಾಡಲಾಗಿದೆ.

## ಪಟ್ಟಾಂಬಿ, ಕೇರಳ

ಫೆಬ್ರುವರಿ 21ರಂದು 32 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸೋ.ಕೃಷ್ಣನ್ ವಿ.ಎ, ಸೋ. ಶಶಿಕುಮಾರ್ ಕೆ.ಪಿ. ಮತ್ತು ಸೋ.ನಾರಾಯಣನ್‌ರವರು ಪ್ರೇಕ್ಷಕರಿಗೆ ಸಂಬೋಧಿಸಿದರು. ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುತ್ತಾ, ವಿಷಯಗಳು ನವ್ಯ, ಆಕರ್ಷಕ ಮತ್ತು ವರ್ತಮಾನ ಕಾಲಕ್ಕೆ ಉಚಿತವಾಗಿವೆ ಎಂದು ಹೇಳಿದರು.

## ಅಹಮದಾಬಾದ್

ಅಹಮದಾಬಾದ್‌ನ ಸುಮಾರು 190 ವಿದ್ಯಾಲಯಗಳು ತಮ್ಮ ಶಾಲಾ ಆವರಣದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಿದ್ದು 8500ಕ್ಕೂ ಮೇಲ್ಪಟ್ಟ ವಿದ್ಯಾರ್ಥಿಗಳು ತಂತಮ್ಮ ವಿಭಾಗಗಳಿಗಾಗಿ ಪ್ರಬಂಧ ಬರೆದರು. ಭಾಗಿಗಳಲ್ಲಿ 6 ಪ್ರಾದೇಶಿಕ ವಿಜಯಿಗಳಿದ್ದರು. ಫೆಬ್ರುವರಿ 28ರಂದು ಅದುಲಜ್ ಆಶ್ರಮದಲ್ಲಿ ಹಿರಿಯ ಅಭ್ಯಾಸಿಗಳು ಪ್ರಶಸ್ತಿಪತ್ರ ವಿತರಿಸಿದರು. 1200ಕ್ಕೂ ಮೇಲ್ಪಟ್ಟ ಆಹ್ವಾನಿತರು(ಪಾಲಕರು ಮತ್ತು ಭಾಗಿಗಳು) ಉಪಸ್ಥಿತರಿದ್ದರು.

## ಮೊರಾದಾಬಾದ್

ಜಿಲ್ಲೆಯ 84 ಶಾಲಾ ಕಾಲೇಜುಗಳಿಂದ 6700ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.ಫೆಬ್ರುವರಿ 24ರಂದು ಯೋಗಾಶ್ರಮದಲ್ಲಿ ನಡೆದ ಸಮಾರಂಭದಲ್ಲಿ ಸೋ.ಶ್ರವಣ್ ಕುಮಾರ್(ಕೇಂದ್ರಮುಖ್ಯಸ್ಥರು) ಮತ್ತು ಸೋ.ಛವಿಯವರು ಮಾತನಾಡಿದರು. ಭಾಗಿಗಳಿಗೆ ಪ್ರಮಾಣಪತ್ರ ನೀಡಲಾಯಿತು ಮತ್ತು ಶಾಲಾಕಾಲೇಜುಗಳಿಗೆ ಗುರುತುಪ್ರಮಾಣ ಪತ್ರ ನೀಡಲಾಯಿತು. ಮುಖ್ಯ ಅತಿಥಿಗಳಾದ ಶ್ರೀ ರಾಮಮೂರ್ತಿ (ಮುಖ್ಯ ಅಭಿವೃದ್ಧಿ ಅಧಿಕಾರಿ, ಮೊರಾದಾಬಾದ್) ರವರು ಇಂತಹ ಬೃಹತ್ ಕಾರ್ಯಕ್ರಮದ ಮೂಲಕ ಮಕ್ಕಳಲ್ಲಿ ಮೌಲ್ಯಗಳ ಪ್ರಜ್ಞೆ ಬೆಳೆಸಲು ಪ್ರಯತ್ನಿಸುತ್ತಿರುವ ಮಿಷನ್ನನ್ನು ಪ್ರಶಂಸಿದರು.

## ಅಭೆದಾನ್‌ಪುರ, ಉತ್ತರಪ್ರದೇಶ

ಫೆಬ್ರುವರಿ 21ರಂದು ವಿವಿಧ ಶಾಲಾಕಾಲೇಜುಗಳ ಸುಮಾರು 180 ವಿದ್ಯಾರ್ಥಿಗಳು, 220 ಪಾಲಕರು, ಶಿಕ್ಷಕರು ಮತ್ತು ಮುಖ್ಯೋಪಾಧ್ಯಾಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಪ್ರಬಂಧ ಸ್ಪರ್ಧೆಗಳ ಪ್ರಾಮುಖ್ಯತೆಯ ಬಗ್ಗೆ ಉಪನ್ಯಾಸ ನಂತರ ಪ್ರಮಾಣಪತ್ರಗಳನ್ನು ಹಂಚಲಾಯಿತು.




## ಕೊಲ್ಹಾಪುರ, ಮಹಾರಾಷ್ಟ್ರ

ಫೆಬ್ರುವರಿ 18ರಂದು ಸಮಾರಂಭವನ್ನು ಏರ್ಪಡಿಸಲಾಗಿತ್ತು. ಒಟ್ಟು 75 ಶಾಲೆಗಳು ಮತ್ತು 6ಕಾಲೇಜುಗಳು ಭಾಗವಹಿಸಿದ್ದು ಸುಮಾರು 3500 ಪ್ರಬಂಧಗಳನ್ನು ಸಂಗ್ರಹಿಸಲಾಯಿತು. ಮಹಾರಾಷ್ಟ್ರದ ವಲಯಪ್ರಮುಖರಾದ ಸೋ. ಸುಭಾಷ್ ವೈದ್ಯರವರು ಮಾತನಾಡಿದರು.

## ಔರಂಗಾಬಾದ್, ಮಹಾರಾಷ್ಟ್ರ

ಫೆಬ್ರುವರಿ 27ರಂದು ಪ್ರಶಸ್ತಿವಿಜೇತ ಮಕ್ಕಳು, ಅವರ ಪಾಲಕರು ಮತ್ತು ಶಾಲಾ ಮುಖ್ಯೋಪಾಧ್ಯಾಯರ ಉಪಸ್ಥಿತಿಯಲ್ಲಿ ಸಮಾರಂಭವು ಜರುಗಿತು.

## ನಾಗ್ಪುರ, ಮಹಾರಾಷ್ಟ್ರ

ಪ್ರಬಂಧಸ್ಪರ್ಧೆಯಲ್ಲಿ 24 ಶಾಲೆಗಳಿಂದ 1000ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇದನ್ನು ಮಾರ್ಚ್ 7ರಂದು ಗಾಂಧಿನಗರ ಆಶ್ರಮದಲ್ಲಿ ನಡೆಸಲಾಯಿತು.

## ಇಂದೋರ್

ಫೆಬ್ರುವರಿ 21ರಂದು ಸುಮಾರು 24 ಕೇಂದ್ರಗಳು ಮುಕ್ತಸಭೆಗಳನ್ನು ಆಯೋಜಿಸಿದ್ದವು. ಸ್ವಯಂಸೇವಾ ತಂಡಗಳು ಪ್ರತಿಯೊಂದು ಶಾಲೆಯಷ್ಟೇ ಅಲ್ಲದೆ ವಿದ್ಯಾರ್ಥಿಗಳ ಮನೆಗಳಿಗೂ ಭೇಟಿ ನೀಡಿ ಪಾಲಕರನ್ನು ಆಹ್ವಾನಿಸಿದರು. ದೊರೆತ ಪ್ರತಿಕ್ರಿಯೆ ಉತ್ತೇಜಕವಾಗಿದ್ದು ಸಣ್ಣ ಮತ್ತು ದೂರದ ಕೇಂದ್ರಗಳಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಿದ್ದರು. ಈ ಮುಕ್ತಸಭೆಗಳಿಂದ ಸುಮಾರು 3000–3500 ಅತಿಥಿಗಳಿಗೆ ಸಹಜಮಾರ್ಗದ ಪರಿಚಯವನ್ನು ನೀಡಲಾಯಿತು.

## ಪುಣೆ

ನಾಂದೇಡ್ ಆಶ್ರಮದಲ್ಲಿ ನಡೆದ ಸಮಾರಂಭದಲ್ಲಿ ಸೋ. ರೂಪಾಲಿಯವರು ನಾವು ಸಾಮಾನ್ಯವಾಗಿ ಋಣಾತ್ಮಕವಾಗಿ ಯೋಚಿಸುತ್ತೇವೆ, ಇದು ಬದಲಾಗಬೇಕು ಎಂದು ಹೇಳಿದರು. ತರುಣರು ತಮ್ಮೊಳಗೆ ನೋಟ ಹರಿಸಿ ನಿಜವಾದ ಸ್ವರೂಪವನ್ನು ಬಾಹ್ಯ ಪ್ರಪಂಚದೊಡನೆ ವ್ಯವಹರಿಸಲು ಉಪಯೋಗಿಸಬೇಕು ಏಕೆಂದರೆ ಆಂತರಿಕ ಜಗತ್ತೇ ಬಾಹ್ಯ ಜಗತ್ತನ್ನು ಸೃಷ್ಟಿಸುವುದು. ಸೋ.ಕೌಸ್ತುಭ್‌ರವರು ಸಮಾರಂಭದ ಅಂಕಿಸಂಖ್ಯೆಗಳ ಬಗ್ಗೆ ಮಾತನಾಡಿದರು ಮತ್ತು ಸೋ.ಶುಕ್ಲಾರವರು (ಮುಖ್ಯ ಅತಿಥಿಗಳು) 'ಮನಸ್ಸನ್ನು ತರಬೇತುಗೊಳಿಸುವ ಸಹಜಮಾರ್ಗ' ಎನ್ನುವ ವಿಷಯದ ಕುರಿತು ಮಾತನಾಡಿದರು. ಪ್ರಮಾಣಪತ್ರಗಳನ್ನು ಗೌರವಪೂರ್ವಕವಾಗಿ ನೀಡಲಾಯಿತು. ಅಂಧಶಾಲೆಯ ವಿದ್ಯಾರ್ಥಿಗಳಿಗಾಗಿ ಚಪ್ಪಾಳೆಯ ಸುರಿಮಳೆಯಾಯಿತು.

## ಬೆಂಗಳೂರು

ಫೆಬ್ರುವರಿ 21ರಂದು ವಲಯದ ಪ್ರಮಾಣಪತ್ರಗಳನ್ನು ಬೆಂಗಳೂರಿನ ಬನಶಂಕರಿ ಆಶ್ರಮದಲ್ಲಿ ವಿತರಿಸಲಾಯಿತು. ಪ್ರತೀ ವಿಭಾಗದ ವಿಜೇತರನ್ನು ತಮ್ಮ ಪ್ರಬಂಧವನ್ನು ಓದಲು ಆಹ್ವಾನಿಸಲಾಯಿತು.ಪ್ರತಿಯೊಬ್ಬ ವಿದ್ಯಾರ್ಥಿಯೂ ನೀಡಲಾದ ವಿಷಯಗಳ ಬಗ್ಗೆ ಚಿಂತಿಸುವ ಸಾಮರ್ಥ್ಯ ಮತ್ತು ಅಗಾಧ ಆತ್ಮವಿಶ್ವಾಸವನ್ನು ತೋರಿಸಿದರು. ವೈಜ್ಞಾನಿಕ ಪ್ರಯೋಗಗಳ ಮೂಲಕ ಹೇಗೆ ಮೌಲ್ಯಗಳನ್ನು ಕಲಿಯಬಹುದು ಎಂಬ ವಿಬಿಎಸ್‌ಇ ಪ್ರಯೋಗಗಳ ಆಧಾರಿತ ನಿರೂಪಣೆಯನ್ನು ಅಭ್ಯಾಸಿಗಳ ಪುಟ್ಟ ವಿಶ್ವಾಸೀ ಮಕ್ಕಳು ಪ್ರದರ್ಶಿಸಿದಾಗ ಆಹ್ವಾನಿತರ ಹೃದಯ ತುಂಬಿ ಬಂದಿತು. ಗುರುಗಳ ವಿಡಿಯೋದ ಲಘು ವೀಕ್ಷಣೆಯ ನಂತರ ಸೋ. ಮಾಧುರಿ ವೆಂಕಟ್‌ರವರು ಸಹಜಮಾರ್ಗದ ಗುರಿಯಬಗ್ಗೆ ಲಘುಪರಿಚಯ ನೀಡಿದರು.

## ಭಾವನಗರ, ಗುಜರಾತ್

ಸಮಾರಂಭವನ್ನು ಸಿಲ್ವರ್‌ಬೆಲ್ ಧ್ಯಾನಮಂದಿರದಲ್ಲಿ ಫೆಬ್ರುವರಿ 21ರಂದು ಆಯೋಜಿಸಲಾಗಿತ್ತು. ಪ್ರಬಂಧ ನಿರ್ವಾಹಕರಾದ ಸೋ. ವೃಸಿಕಾರವರು ಭಾವನಗರದ ಅಂಕಿಅಂಶಗಳನ್ನು ನೀಡಿದರೆ, ಸೋ.ವಿನಯ್(ನವ್ಸಾರಿ) ಮತ್ತು ಭಾವನಗರ ಕೇಂದ್ರದಮುಖ್ಯಸ್ಥರಾದ ಸೋ. ಧರ್ಮೇಶ್‌ಭಾಯಿರವರು ಮಾತನಾಡಿದರು.

## ಭುಜ್

ಭುಜ್‌ನ ಸಹಯೋಗ್ ಹಾಲ್‌ನಲ್ಲಿ ಫೆಬ್ರುವರಿ 27ರಂದು 250 ಅತಿಥಿಗಳೊಂದಿಗೆ ಸಮಾರಂಭವನ್ನು ಆಯೋಜಿಸಲಾಗಿತ್ತು. ಸ್ಪರ್ಧೆಯಲ್ಲಿ ಪಾಲ್ಗೊಂಡ ಎಲ್ಲಾ 32 ಶಾಲೆಗಳ ವಿಜೇತ ವಿದ್ಯಾರ್ಥಿಗಳು, ಪಾಲಕರು ಮತ್ತು ಮುಖ್ಯೋಪಾಧ್ಯಾಯರನ್ನು ಆಹ್ವಾನಿಸಲಾಗಿತ್ತು. ಶ್ರೀ ಮಹೇಂದ್ರ ಸಿಂಗ್‌ರವರು ಮುಖ್ಯ ಅತಿಥಿಗಳಾಗಿದ್ದರು. ಕೇಂ.ಪ್ರ. ಸೋ. ಹರ್ಷಾ ಚೌಹಾನ್ ಮತ್ತು ಪ್ರಬಂಧ ನಿಯೋಜಕರಾದ ಸೋ. ಗೋಪಿ ತ್ರಿವೇದಿಯವರು ಸಭೆಯಲ್ಲಿ ಮಾತನಾಡಿದರು.

ಹಾಗೆಯೇ ಗಾಂಧಿಧಾಮ ಕೇಂದ್ರದಲ್ಲಿ ಅಂಜರ್ ಪ್ರದೇಶದ ಶಾಸಕರು ಮುಖ್ಯ ಅತಿಥಿಗಳಾಗಿದ್ದರೆ ಗಾಂಧಿಧಾಮ ಪುರಸಭೆಯ ಅಧ್ಯಕ್ಷರು ಗೌರವ ಅತಿಥಿಗಳಾಗಿದ್ದರು. 180ಕ್ಕೂ ಮೀರಿ ಅತಿಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಚಂಡೀಗಢ

ಈ ವರ್ಷ ಚಂಡೀಗಢದ ಪಂಜಾಬ್ ವಿಶ್ವವಿದ್ಯಾಲಯ, ಪಂಚ್‌ಕುಲ ಮತ್ತು ಮೊಹಾಲಿಯ 16 ಶಾಲೆಗಳು, 4 ಕಾಲೇಜುಗಳು ಮತ್ತು ಅನೇಕ ಶಿಕ್ಷಣ ಸಂಸ್ಥೆಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ವಲಯ ಮಟ್ಟದಲ್ಲಿ ವಿಜೇತರಾದ ವಿದ್ಯಾರ್ಥಿಗಳ ಸನ್ಮಾನ ಸಮಾರಂಭದಲ್ಲಿ ವಲಯ ಆಯೋಜಕರಾದ ಸೋ. ಕಾನನ್ ಸಚ್‌ದೇವ, ಸೋ.ಗುರ್‌ದೇವ್ ಕೌರ್ ಮತ್ತು ಸೋ.ಸುದರ್ಶನ್‌ರವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. 27 ವಿಜೇತರಿಗೆ ವಲಯ ಮುಖ್ಯಸ್ಥರಾದ ಸೋ.ಮೇಜರ್ ಜನರಲ್ ಹರ್‌ಭಜನ್ ಸಿಂಗ್‌ರವರು ಪಾರಿತೋಷಕಗಳನ್ನು ವಿತರಿಸಿದರು.

## ಲುಧಿಯಾನ

ಪಂಜಾಬ್ ಕೃಷಿ ವಿಶ್ವವಿದ್ಯಾಲಯದ ಜೇಕಬ್ ಹಾಲ್‌ನಲ್ಲಿ ಏಪ್ರಿಲ್ 11 ರಂದು ವಲಯ ಮಟ್ಟದ 8 ಮತ್ತು ಜಿಲ್ಲಾಮಟ್ಟದ 40 ವಿಜೇತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ವಲಯಮಟ್ಟದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರದೊಡನೆ ಪುಸ್ತಕವನ್ನು ನೆನಪಿನ ಕಾಣಿಕೆಯೊಂದಿಗೆ ನೀಡಲಾಗಿ ಇತರರಿಗೆ ಪ್ರಮಾಣಪತ್ರದೊಂದಿಗೆ 'ನನ್ನ ಗುರುದೇವ' ಪುಸ್ತಕವನ್ನು ನೀಡಲಾಯಿತು. ಸೇಂಟ್ ಥಾಮಸ್ ಶಾಲೆಗೆ ಅತ್ಯುತ್ತಮ ಭಾಗಿಯ ಟ್ರೋಫಿಯಿಂದ ಗೌರವಿಸಲಾಯಿತು. ಖ್ಯಾತ ಶಿಕ್ಷಣತಜ್ಞ ಡಾ. ಎಂ.ಎ.ಝಹೀರ್, ಡಾ.ಪ್ರೇಮ್‌ಕುಮಾರ್ ಮತ್ತು ವಲಯ ಮುಖ್ಯಸ್ಥರಾದ ಸೋ.ಮೇಜರ್ ಜನರಲ್ ಹರ್‌ಭಜನ್ ಸಿಂಗ್‌ರವರು ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು.

ಪಾಣಿಪತ್ ಕೇಂದ್ರವು ಏಪ್ರಿಲ್ 4ರಂದು 35 ವಿದ್ಯಾರ್ಥಿಗಳನ್ನು ಸನ್ಮಾನಿಸಲು ಪಾನಿಪತ್ ಶುದ್ಧೀಕರಣ ಘಟಕದ ಅಧಿಕಾರಿಗಳ ಕ್ಲಬ್‌ನಲ್ಲಿ ಕಾರ್ಯಕ್ರಮವನ್ನು ಆಯೋಜಿಸಿತ್ತು. ಮುಖ್ಯ ಅತಿಥಿಗಳಾದ ಶ್ರೀ ರಾಜ್‌ಕುಮಾರ್ ಘೋಷ್ ಮತ್ತು ಶ್ರೀ ಅಶ್ವನಿ ಶರ್ಮಾರವರು ವಿಜೇತರಿಗೆ ಬಹುಮಾನ ವಿತರಿಸಿದರು. ಸಮಾರಂಭದಲ್ಲಿ ಎಲ್ಲಾ ಸ್ಥಳೀಯ ಅಭ್ಯಾಸಿಗಳು ಪಾಲ್ಗೊಂಡರು.

## ಕೊಯಮತ್ತೂರು

ಫೆಬ್ರುವರಿ 22ರಂದು 60ಕ್ಕಿಂತ ಹೆಚ್ಚು ಶಾಲೆಗಳಿಂದ 120 ವಿದ್ಯಾರ್ಥಿಗಳು ತಮ್ಮ ಪಾಲಕರೊಂದಿಗೆ ನಾಚಿಪಾಳ್ಯಂ ಆಶ್ರಮಕ್ಕೆ ಬಂದಿದ್ದರು. ಕೇಂದ್ರಮುಖ್ಯಸ್ಥ ಸೋ. ಕೆ.ಆರ್. ವೈದ್ಯನಾಥನ್‌ರ ಸ್ವಾಗತ ಭಾಷಣದ ನಂತರ ಸೋ.ಟಿ.ಎಸ್ ಮಣಿಯಮ್, ಸೋ. ಕೆ. ಈಶ್ವರಿಯವರು ಮಾತನಾಡಿದರು. ಸೋ. ವೆಂಕಟರಾಮನ್‌ರವರು ವಿದ್ಯಾರ್ಥಿಗಳಿಗೆ ಪ್ರಮಾಣಪತ್ರದೊಡನೆ ಪುಸ್ತಕಗಳನ್ನು ನೀಡಿದರು. 4 ವಲಯ ಮಟ್ಟದ ವಿಜೇತರಿಗೆ ಪ್ರಮಾಣ ಪತ್ರದೊಡನೆ 'ನನ್ನ ಗುರುದೇವ' ಪುಸ್ತಕವನ್ನು ನೀಡಲಾಯಿತು. ನಾಲ್ಕು ಶಿಕ್ಷಣ ಸಂಸ್ಥೆಗಳಿಗೆ ಮೆಚ್ಚುಗೆಪತ್ರ ನೀಡಲಾಯಿತು.

## ಗೌಹಾಟಿ

ಏಪ್ರಿಲ್ 4ರಂದು ಸೋ. ಸಿಧೇಶ್ವರ್ ಪಾಂಡೆಯವರು ಗೌಹಾಟಿ ಮತ್ತು ಅಕ್ಕಪಕ್ಕದ




ಪ್ರದೇಶಗಳ ಶಾಲೆಗೆರಡು ಆಯ್ದ ಅತ್ಯುತ್ತಮ ಪ್ರಬಂಧದಂತೆ 90 ವಿಜೇತರಿಗೆ ಪ್ರಮಾಣಪತ್ರ ನೀಡಲು ಸಮಾರಂಭ ಏರ್ಪಡಿಸಿದ್ದರು. ಸೋ. ಅಶೋಕ್ ಸೇನ್‌ಗುಪ್ತಾರವರು ಸಭೆಯಲ್ಲಿ ಪ್ರಸ್ತುತಿ ನೀಡಿದರು. ಇದು ಲಘು ಪ್ರಶ್ನೋತ್ತರ ಕಾರ್ಯಕ್ರಮವಾಗಿ ಮೂಡಿಬಂದಿತು.

## ಹುಬ್ಬಳ್ಳಿ, ಕರ್ನಾಟಕ

ಹುಬ್ಬಳ್ಳಿ ಮತ್ತು ಧಾರವಾಡದ ಸ್ವಯಂಸೇವಕರಲ್ಲಿ ಈ ಪ್ರಬಂಧ ಕಾರ್ಯಕ್ರಮವು ಉತ್ಸಾಹ ಮತ್ತು ಭ್ರಾತೃತ್ವ ಮೂಡಿಸಿತು. ಮುಖ್ಯ ಅತಿಥಿಗಳಾದ ವಿಷ್ಣು ಭಾಸ್ಕರ ಭಟ್‌ರವರು ಇಂದಿನ ಸಮಾಜದಲ್ಲಿ ಇಂತಹ ಚಟುವಟಿಕೆಯ ಪ್ರಾಮುಖ್ಯತೆಯ ಬಗ್ಗೆ ಮಾತನಾಡಿದರು. ಪ್ರಚಾರರಹಿತವಾಗಿ ಕಾರ್ಯದಲ್ಲಿ ತೊಡಗಿರುವ ಇಂತಹ ಸಂಸ್ಥೆಯ ಅಸ್ತಿತ್ವದ ಅರಿವು ಅವರಿಗಿರಲಿಲ್ಲ. ಸರಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸಾರಂಗಮಠರವರು ಹೇಳಿದರು, ಕೆಲವೇ ಸಂಸ್ಥೆಗಳು ತಾವು ಬೋಧಿಸುವುದನ್ನು ಕೃತಿಗಿಳಿಸುತ್ತವೆ ಮತ್ತು ಅವರ ಪ್ರಕಾರ SRCM ತಾನು ಬೋಧಿಸುವುದನ್ನು ಮಾಡಿ ತೋರಿಸುತ್ತದೆ. ಸುಮಾರು 70 ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು. ಮಕ್ಕಳು ಮತ್ತು ತರುಣರು ಪ್ರದರ್ಶಿಸಿದ ಕಿರುನಾಟಕವು ಮನೋರಂಜಕವಾಗಿದ್ದು ಎಲ್ಲರು ಮೆಚ್ಚಿದರು.

## ಲಖನೌ

ಲಖನೌನಲ್ಲಿ 180 ಶಾಲಾಕಾಲೇಜುಗಳಿಂದ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಆಯಾ ವಿಭಾಗದ ವಿಜೇತರಿಗೆ ಸೋ. ಯು.ಎಸ್. ಬಾಜಪೇಯಿರವರು ಪ್ರಶಸ್ತಿಪ್ರದಾನ ಮಾಡಿದರು. ವಲಯ ಮುಖ್ಯಸ್ಥರು ಸೋ. ಶ್ಯಾಮ್‌ಜಿ ಮೆಹ್ರೋತ್ರಾರವರು ಈ ಸಂದರ್ಭದಲ್ಲಿ ಮಾತನಾಡಿದರು.

## ತೇಜ್‌ಪುರ

ಏಪ್ರಿಲ್ 11 ರಂದು ವಿಜೇತರು, ಅವರ ಪಾಲಕರು ಮತ್ತು ಶಿಕ್ಷಕರೂ ಸೇರಿದಂತೆ 200 ಅತಿಥಿಗಳು ಜಮಾಯಿಸಿದ್ದರು. ಕೆಲ ಆಕಾಂಕ್ಷಿಗಳು ಸಾಧನೆಯನ್ನು ಪ್ರಾರಂಭಿಸಲು ಉತ್ಸುಕತೆ ತೋರಿದರು. ಮಿಷನ್ನಿನ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು.

## ತ್ರಿಶೂರ್, ಕೇರಳ

ತ್ರಿಶೂರ್‌ನ ಯೋಗಾಶ್ರಮದಲ್ಲಿ ಫೆಬ್ರುವರಿ 28, ಭಾನುವಾರದಂದು ಕೇಂದ್ರದಮುಖ್ಯಸ್ಥ ಸೋ. ಟಿ.ಪಿ.ನಾರಾಯಣನ್‌ರವರು ಸಭೆ ಸೇರಿದ್ದ ವಿವಿಧ ಶಾಲಾಕಾಲೇಜುಗಳ ವಿದ್ಯಾರ್ಥಿಗಳು, ಪಾಲಕರು ಮತ್ತು ಶಿಕ್ಷಕರನ್ನು ಸ್ವಾಗತಿಸಿದರು. 31 ಶಾಲಾಕಾಲೇಜುಗಳ 300 ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕೇರಳದಲ್ಲಿ SMRTI ನ ಆಯೋಜಕರಾದ ಸೋ. ಎ.ಮಾಧವನ್‌ರವರು ಸಭೆಯಲ್ಲಿ ಮಾತನಾಡಿದರು. ವಲಯ ಮುಖ್ಯಸ್ಥರಾದ ಸೋ. ಕೆ.ಯು.ಮೋಹನ್‌ರವರು ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ನೀಡಿದರು ಮತ್ತು ಶಿಕ್ಷಣಸಂಸ್ಥೆಗಳಿಗೆ ಮೆಚ್ಚುಗೆ ಪತ್ರವನ್ನು ವಿತರಿಸಿದರು.

## ಬರೋಡಾ

ಅಲಕಾಪುರಿಯ ಬರೋಡಾ ಪ್ರೌಢಶಾಲೆಯಲ್ಲಿ ಫೆಬ್ರುವರಿ 28ರಂದು ಸುಮಾರು 200 ಅತಿಥಿಗಳು ಸೇರಿದ್ದರು. ಸೋ. ಪೂನಮ್ ಬಬ್ಬರ್, ಸೂರತ್‌ನ ಡಾ.ಸುರೇಂದ್ರ ಅಗರ್ವಾಲ್, ಸೋ.ಪ್ರಭಾ ಶರ್ಮಾ ಮತ್ತು ಸೋ. ಹಿರೇನ್ ಶಾಹ್‌ರವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಅತಿಥಿಗಳ ಅನಿಸಿಕೆ ತಿಳಿದುಕೊಳ್ಳಲು ಫಾರ್ಮ್‌ನ್ನು ನೀಡಲಾಗಿತ್ತು ಹಾಗೂ ಅನೇಕರು ಸಹಜಮಾರ್ಗ ಸೇರಲು ಕಾತರರಾಗಿದ್ದುದು ಕಂಡುಬಂದಿತು.

# ಅಭ್ಯಾಸಿ ತರಬೇತು ಕಾರ್ಯಕ್ರಮಗಳು

## ಮೊರಾದಾಬಾದ್

ಮಾರ್ಚ್ 7ರಂದು ಮೊದಲ ಹಂತದ ತರಬೇತಿ ಕಾರ್ಯಕ್ರಮವನ್ನು ಮೊರಾದಾಬಾದ್ ಕೇಂದ್ರದಲ್ಲಿ ನಡೆಸಲಾಯಿತು. ಸುಮಾರು ಮೂವತ್ತು ಅಭ್ಯಾಸಿಗಳಿಗಾಗಿ ಸೋ. ಸುಧಾಂಶುರವರು ನಡೆಸಿಕೊಟ್ಟ ಈ ಕಾರ್ಯಕ್ರಮದಲ್ಲಿ ಅವರೆಲ್ಲ ಪೂಜ್ಯ ಬಾಬೂಜಿಯವರ ಮತ್ತು ಗುರುಗಳ ಅಪರೂಪದ ಶ್ರವಣ ಮತ್ತು ದೃಶ್ಯಗಳ ತುಣುಕುಗಳನ್ನು ವೀಕ್ಷಿಸಿ ಆನಂದಿಸಿದರು. ನಂತರ ಅನೇಕರು ಹೊಸ ಅಭ್ಯಾಸಿಗಳಿಗೆ ಇಂತಹ ತರಬೇತಿ ಉಪಯೋಗಿ ಹಾಗೂ ತಾವು ಈಗ ಪದ್ಧತಿಯ ಬಗ್ಗೆ ಹೆಚ್ಚು ಸ್ಪಷ್ಟವಾಗಿ ತಿಳಿದುಕೊಂಡಿದ್ದು, ಗುರಿ ಸಾಧಿಸಲು ಕಾತರರಾಗಿದ್ದೇವೆ ಎಂದು ಅನಿಸಿಕೆ ವ್ಯಕ್ತ ಪಡಿಸಿದರು.

## ನಾನೌಟ

ಏಪ್ರಿಲ್ 4 ರಂದು ಮೊದಲ ಹಂತದ ತರಬೇತಿ ಕಾರ್ಯಕ್ರಮವನ್ನು ಸೋ. ರಾಜೀವ್ ಕುಮಾರ್‌ರವರು ನಡೆಸಿಕೊಟ್ಟರು. ಒಟ್ಟು ಇಪ್ಪತ್ನಾಲ್ಕು ಅಭ್ಯಾಸಿಗಳು ಭಾಗವಹಿಸಿದ್ದರು.

## ಶ್ರೀವಿಲ್ಲಿಪುತ್ತೂರು

ವಿರುಧುನಗರ್ ಜಿಲ್ಲೆಯ ಈ ಕೇಂದ್ರದಲ್ಲಿ ಮಾರ್ಚ್ 7ರಂದು ಅಭ್ಯಾಸಿ ತರಬೇತು ಕಾರ್ಯಕ್ರಮವನ್ನು ಸೋ. ಪೊನ್ನುತಾಯ್ ಹಾಗೂ ಸೋ.ವಿ.ಬಾಲಸುಬ್ರಮಣ್ಯಮ್‌ರವರು ನಡೆಸಿಕೊಟ್ಟರು. ಶ್ರೀವಿಲ್ಲಿಪುತ್ತೂರು, ರಾಜಪಾಳಯಮ್, ತಿರುತಂಗಲ್ ಮತ್ತು ಶಿವಕಾಶಿ ಕೇಂದ್ರಗಳಿಂದ ಸುಮಾರು 25 ಅಭ್ಯಾಸಿಗಳು ಪಾಲ್ಗೊಂಡರು. ಅವರು ಹೊಸ ಅಭ್ಯಾಸಿಗಳಿಗಷ್ಟೇ ಅಲ್ಲದೆ ಈ ಕಾರ್ಯಕ್ರಮವು ಬೇರೆಯವರಿಗೂ ಲಾಭದಾಯಕವೆಂದು ಅಭಿಪ್ರಾಯ ಪಟ್ಟರು.

## ಕರ್ನೂಲು

ಸುಮಾರು 23 ಹೊಸ ಅಭ್ಯಾಸಿಗಳಿಗಾಗಿ ಫೆಬ್ರುವರಿ 28ರಂದು ಅಭ್ಯಾಸಿ ತರಬೇತು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅಪಾರ ಉತ್ಸಾಹ ಮತ್ತು ಪ್ರತಿಕ್ರಿಯೆಯಿಂದ ಕಾರ್ಯಕ್ರಮದಲ್ಲಿ ಅನೇಕ ಸ್ಪಷ್ಟೀಕರಣಗಳನ್ನು ಅಪೇಕ್ಷಿಸಲಾಯಿತು. ಗುರುಗಳ ಶ್ರವಣ-ದೃಶ್ಯ ಮಾಧ್ಯಮದ ಮೂಲಕ ನೀಡಿದ ವಿವರಣೆಗಳು ಅವರಲ್ಲಿ ಸಾಧನೆಯ ಕುರಿತು ಇದ್ದ ಹಲವಾರು ಸಂದೇಹಗಳನ್ನು ಪರಿಹರಿಸಿತು ಎಂದು ಅವರು ಹೇಳಿದರು.

## ಬಳ್ಳಾರಿ

ಫೆಬ್ರುವರಿ 14ರಂದು ಬಳ್ಳಾರಿಯ ಸೋ. ಸೊಂತ ಸುಧಾಕರರವರ ಮನೆಯ ಧ್ಯಾನಮಂದಿರದಲ್ಲಿ ಅಭ್ಯಾಸಿ ತರಬೇತು ಕಾರ್ಯಕ್ರಮವನ್ನು ನಡೆಸಲಾಯಿತು. ಕನ್ನಡದಲ್ಲಿ ನಡೆಸಲಾದ ಈ ಕಾರ್ಯಕ್ರಮದಲ್ಲಿ 25 ಅಭ್ಯಾಸಿಗಳು ಪಾಲ್ಗೊಂಡರು. ಸೋ. ನಿಜಲಿಂಗಪ್ಪ, ಸೋ. ಪ್ರಹ್ಲಾದ್ ಪಾಕಣಿಕರ್ ಮತ್ತು ಸೋ. ರಾಜು ಕಾಶಂಪುರ್‌ಕರ್‌ರವರು ಈ ಸಂದರ್ಭದಲ್ಲಿ ಮಾತನಾಡಿದರು. ಅಭ್ಯಾಸಿಗಳು ಇದರಿಂದ ಲಾಭವನ್ನು ಪಡೆದು ಇಂತಹ ಕಾರ್ಯಕ್ರಮಗಳನ್ನು ಹೆಚ್ಚು ಬಾರಿ ನಡೆಸಬೇಕೆಂದು ಅಭಿಪ್ರಾಯ ಪಟ್ಟರು.

## ಸಿಕ್ಕಾ

60 ಉತ್ಸಾಹೀ ಅಭ್ಯಾಸಿಗಳನ್ನೊಳಗೊಂಡ ಸಿಕ್ಕಾವು ಹೊಸದಾಗಿ ಅಭಿವೃದ್ಧಿ ಪಡಿಸಿದ ಹಾಗೂ ಜಾಮ್‌ನಗರದ ಉಪನಗರವಾದ್ದರಿಂದ ದೂರದ ಪ್ರದೇಶವಾಗಿದೆ. ಅಹಮದಾಬಾದ್‌ನ ಸೋ. ಅಂಕಿತ್ ವ್ಯಾಸ್‌ರವರು ಏಪ್ರಿಲ್11ರಂದು ತರಬೇತಿಯನ್ನು ನಡೆಸಿಕೊಟ್ಟರು. ಸೋ. ಅಂಕಿತ್‌ರವರು ಸ್ಲೈಡುಗಳನ್ನು ಹಿಂದಿಯಲ್ಲಿ ವಿವರಿಸುತ್ತಿದ್ದಂತೆ ಎಲ್ಲಾ ಪ್ರತಿನಿಧಿಗಳಲ್ಲಿ ಉತ್ಸಾಹ ತಲೆದೋರಿತು. ಗುರುಗಳ ಉಪನ್ಯಾಸದ ಭಾಗಗಳನ್ನು ನೋಡುತ್ತಿದ್ದಂತೆ ಎಲ್ಲರಿಗೂ ಅವರ ಸಾನ್ನಿಧ್ಯದ ಅನುಭವವಾಯಿತು.

## ರಾಜನಂದಗಾಂವ್

ಮಾರ್ಚ್ 24ರಂದು 54 ಅಭ್ಯಾಸಿ ಸೋದರ ಸೋದರಿಯರಿಗಾಗಿ ಹಿಂದಿಯಲ್ಲಿ ಅಭ್ಯಾಸಿ ತರಬೇತು ಕಾರ್ಯಕ್ರಮವನ್ನು ಸೋ.ದೀಪಕ್ ತ್ಯಾಗಿ ಮತ್ತು ವಿಜಯ್ ಅಯ್ಯರ್‌ರವರು ನಡೆಸಿಕೊಟ್ಟರು. ಈ ಪ್ರಸ್ತುತಿಯ ಕಾರಣ ಅಭ್ಯಾಸಿಗಳು ಓದಿ ಗ್ರಹಿಸಬೇಕಿದ್ದರಿಂದ ಮೊದಲನೇ ಬಾರಿಗೆ ತಾವು ಈ ಕಾರ್ಯದಲ್ಲಿ ಶಾಮೀಲಾಗಿದ್ದೇವೆಂಬ ಭಾವನೆಯೊಂದಿಗೆ ಸಂತಸಗೊಂಡರು ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಅವರ ಎಲ್ಲಾ ಸಂದೇಹಗಳು ಗುರುಗಳ ಸೂಕ್ತಿ ಮತ್ತು ಅವರ ವಿಡಿಯೋ ಭಾಗಗಳ ವೀಕ್ಷಣೆಯಿಂದ ಪರಿಹಾರವಾಯಿತು.

## ಪೇಂದ್ರ

ಛತ್ತೀಸ್‌ಗಢ ರಾಜ್ಯದ ನಿರ್ಜನ ತಾಣದಲ್ಲಿರುವ ಪೇಂದ್ರ ಕೇಂದ್ರದಲ್ಲಿ ಹಿಂದಿಯಲ್ಲಿ ಅಭ್ಯಾಸಿ ತರಬೇತು ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. 58 ಅಭ್ಯಾಸಿ ಸೋದರ ಸೋದರಿಯರು ಮತ್ತು 40 ಸೋದರಿಯರು ಗ್ರಾಮೀಣ ಹಿನ್ನೆಲೆಯವರಾದರೂ ಅವರು ತಮ್ಮನ್ನು ತೊಡಗಿಸಿಕೊಂಡಿರುವ ರೀತಿ ಊಹೆಗೂ ನಿಲುಕದ್ದು. ಪೂರ್ಣ ವಾತಾವರಣ ಭಂಡಾರದಂತಿತ್ತು. ಕಾರ್ಯಕ್ರಮವನ್ನು ಸೋ.ದೀಪಕ್ ತ್ಯಾಗಿ, ಸೋ.ಶ್ರೀನಿವಾಸ್ ಮತ್ತು ಸೋ. ಲಲಿತಾ ತ್ಯಾಗಿಯವರು ನಡೆಸಿಕೊಟ್ಟರು. ಸೋ ಸ್ವಪ್ನಿಲ್ ಖತ್ರಿಯವರು ಇದನ್ನು ಆಯೋಜಿಸಿದ್ದರು.

## ರಾಯ್‌ಪುರ

ಏಪ್ರಿಲ್ 4ರಂದು ನಡೆದ ತರಬೇತಿ ಕಾರ್ಯಕ್ರಮದಲ್ಲಿ 52 ಅಭ್ಯಾಸಿಗಳು ಪಾಲ್ಗೊಂಡರು. ಅಭ್ಯಾಸಿಗಳು ಉತ್ಸಾಹದಿಂದ ಭಾಗಿಗಳಾದರು ಮತ್ತು ಸೋ.ದೀಪಕ್ ತ್ಯಾಗಿಯವರು ಉತ್ತಮ ಪ್ರಶ್ನೋತ್ತರ ಕಾರ್ಯಕ್ರಮ ನಡೆಸಿದರು. ಕಾರ್ಯಕ್ರಮವನ್ನು ಸೋ. ವಿಷ್ಣು ಉಪಾಧ್ಯಾಯ, ಸೋ.ಸತೀಶ್ ಶರ್ಮಾ ಮತ್ತು ಸೋ.ದೇವನಾರಾಯಣ್‌ರವರು ನಡೆಸಿಕೊಟ್ಟರು.

## ಬಿಲಾಸ್‌ಪುರ್

ಅಭ್ಯಾಸಿ ತರಬೇತಿ ಕಾರ್ಯಕ್ರಮವನ್ನು ಹಿಂದಿಯಲ್ಲಿ ಮಾರ್ಚ್ 7ರಂದು ನಡೆಸಲಾಯಿತು. ಅಭ್ಯಾಸಿಗಳೆಲ್ಲ ಕಾರ್ಯಕ್ರಮದ ರೂಪರೇಷೆ ಮಾಡಿರುವ SMRTIನ ಪ್ರಯತ್ನವನ್ನು ಪ್ರಶಂಸಿಸಿದರು.

## ದುರ್ಗ

ಫೆಬ್ರುವರಿ 21ರಂದು ಹಿಂದಿಯಲ್ಲಿ ಅಭ್ಯಾಸಿ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು. ಕೇಂದ್ರದ ಮುಖ್ಯಸ್ಥ ಸೋ. ಡಿ.ಕೆ. ನಿಗಮ್‌ರವರು ಇದರ ರೂವಾರಿ. 37 ಅಭ್ಯಾಸಿ ಸೋದರ ಸೋದರಿಯರು ಪ್ರಶಾಂತ ಹಾಗೂ ಉತ್ಸಾಹದಾಯಕ ವಾತಾವರಣದಲ್ಲಿ ಭಾಗವಹಿಸಿದರು. ವಲಯಮುಖ್ಯಸ್ಥ ಸೋ. ದೀಪಕ್ ತ್ಯಾಗಿ ಮತ್ತು ಸೋ. ಶ್ರೀನಿವಾಸ ದೇಶಮುಖ್‌ರವರು ಇದನ್ನು ನಡೆಸಿಕೊಟ್ಟರು. ಸೋ. ದೀಪಕ್ ತ್ಯಾಗಿಯವರು ನಡೆಸಿದ ಪ್ರಶ್ನೋತ್ತರ ಕಾರ್ಯಕ್ರಮವು ಅಭ್ಯಾಸಿಗಳಲ್ಲಿ ಆಸಕ್ತಿ ಮೂಡಿಸಿ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

## ಜಾಮ್‌ನಗರ್

ತುಂಬಿದ ಪುರಭವನದಲ್ಲಿ 'ಸಮತೋಲಿತ ಅಸ್ತಿತ್ವ ಮತ್ತು ಧ್ಯಾನ' ಎಂಬ ವಿಷಯದಿಂದ ಸಭೆಯು ಪ್ರಾರಂಭಗೊಂಡಿತು. ಅಭ್ಯಾಸಿಗಳು ತಮ್ಮ ಕುಟುಂಬ, ಸ್ನೇಹಿತರು ಮತ್ತು ಸಹೋದ್ಯೋಗಿಗಳಿಗೆ ಸಹಜಮಾರ್ಗದ ಪರಿಚಯ ನೀಡಿ, ಚರ್ಚಿಸಿ ಅವರನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಲು ಇದು ಸದವಕಾಶವಾಗಿತ್ತು. ಸಭೆಯು ಎರಡು ಶಾಸ್ತ್ರೀಯ ನೃತ್ಯಗಳಿಂದ ಪ್ರಾರಂಭವಾಯಿತು. ಸೋ.ಜಯಶ್ರೀಬೆನ್ ಲಾಲ್‌ಭಾಯಿರವರು ಸಹಜಮಾರ್ಗದಲ್ಲಿನ ತಮ್ಮ ಅನುಭವಗಳನ್ನು ಹಂಚಿಕೊಂಡರು ಮತ್ತು ವರ್ತಮಾನದ ಜೀವನದಲ್ಲಿ ಧ್ಯಾನದ ಮುಖಾಂತರ ಸಮತೋಲಿತ ಜೀವನದ ಅಗತ್ಯವನ್ನು ಒತ್ತಿಹೇಳಿದರು.

ಸೋ.ಹಿರೇನ್‌ಭಾಯಿ ಶಾಹ್‌ರವರು ಸಹಜಮಾರ್ಗ ಧ್ಯಾನಪದ್ಧತಿಯನ್ನು ಮತ್ತು ದೈನಂದಿನ ಜೀವನದಲ್ಲಿ ಅದರ ಪಾತ್ರವನ್ನು ವಿವರಿಸಿದರು. ಸೋ. ಸುರೇಶ್ ರಾಜಗೋಪಾಲನ್‌ರವರು ಮಾನವ ಜೀವನದಲ್ಲಿ ಅತ್ಯುಚ್ಚ ಆಧ್ಯಾತ್ಮಿಕ ಗುರಿಯನ್ನು ಮುಟ್ಟಲು ಸಹಕರಿಸುವ ಪರಿಣಾಮಕಾರೀ ಸಹಜಮಾರ್ಗದ ಕುರಿತು ವಿವರಿಸಿದರು ಮತ್ತು ಆಧ್ಯಾತ್ಮಿಕ ಪ್ರಗತಿಗೆ ಅಡಚಣೆಯುಂಟಾಗದಂತೆ ಹೇಗೆ ಲೌಕಿಕ ಜೀವನ ನಡೆಸಬಹುದೆಂದು ತಿಳಿಸಿದರು.

ಎಲ್ಲಾ ಉಪನ್ಯಾಸಗಳ ನಂತರ ಪ್ರೇಕ್ಷಕರಿಗೆ ಉಪನ್ಯಾಸಕಾರರು, ಮತ್ತು SRCMನ ಸ್ವಯಂಸೇವಕರೊಂದಿಗೆ ಮಾತುಕತೆ ನಡೆಸಲು ಅವಕಾಶವಿದ್ದಿತು. ಹಲವರು ಪದ್ಧತಿಯ ಬಗ್ಗೆ ಹೆಚ್ಚಿನ ಮಾಹಿತಿ ಹೊಂದಲು ಹಾಗೂ ಪದ್ಧತಿಗೆ ಸೇರಲು ಆಸಕ್ತಿ ತೋರಿದರು.



"ಈಗ ಆಶ್ರಮದಲ್ಲೇನು ವ್ಯತ್ಯಾಸವಿದೆ? ಆಶ್ರಮವೂ ಸಹ ಪರಮಪೂಜ್ಯ ಗುರುಗಳಿಂದ ಚಾರ್ಜ್ ಮಾಡಲ್ಪಟ್ಟಿದೆ. ಆದರೆ ನಾವು ಧ್ಯಾನ ಮಾಡಲು ಕುಳಿತಾಗ ನಾವು ಯಾವಾಗಲೂ ಆ ಶಕ್ತಿವರ್ಧನೆ ಮಾಡುತ್ತಲೇ ಇರುತ್ತೇವೆ. ಮಂದಿರಗಳಲ್ಲಿ ಇದು ಯಾವಾಗಲೂ ಕಡಿಮೆಯಾಗುತ್ತಲೇ ಇರುವಾಗ ಆಶ್ರಮದಲ್ಲಿ ಇದು ಏರಿಕೆಯಾಗುತ್ತಿದೆ, ಹಾಗಾಗಿ ನಿಮ್ಮ ಆಶ್ರಮಗಳಲ್ಲಿ ನೀವೇನು ಮಾಡಬೇಕೋ ಅದನ್ನು ಮಾಡಿದರೆ, ಐವತ್ತು ವರ್ಷಗಳ ನಂತರ ಅದು ಉತ್ತಮ ಸಂಚಿತ ಶಕ್ತಿ, ಮಧುರ ವಾತಾವರಣದಿಂದ ಕೂಡಿದ್ದು ಎಷ್ಟು ಸೂಕ್ಷ್ಮವಾಗಿರುತ್ತದೆಯೆಂದರೆ ನೀವೇ ಹೇಳಬಹುದು, ' ಇದೇ ಸ್ವರ್ಗ. ಇದೇ ದಿವ್ಯಲೋಕ.'"

## ಒಂಗೋಲ್ ಆಶ್ರಮ

### ಪುಟ್ಟ ಪಟ್ಟಣದಲ್ಲಿ ದೊಡ್ಡ ಹೃದಯಗಳ ನಿರ್ಮಾಣ

ಒಂಗೋಲ್ ಆಂಧ್ರಪ್ರದೇಶದ ಪ್ರಕಾಶಮ್ ಜಿಲ್ಲೆಯ ಪ್ರಧಾನ ಕಚೇರಿಯಾಗಿದೆ. ಆಸಕ್ತಿಯುತ ವಿಷಯವೆಂದರೆ 1969ನಲ್ಲಿ ಬಾಬೂಜಿ ಮಹಾರಾಜರು ಮದ್ರಾಸ್‌ಗೆ ಪಯಣಿಸುತ್ತಿರುವಾಗ ಅವರ ರೈಲು ಪ್ರಬಲ ಬಿರುಗಾಳಿ ಮತ್ತು ಪ್ರವಾಹದ ಕಾರಣವಾಗಿ 72 ಘಂಟೆಗಳ ಕಾಲ ದುರ್ಗಮ ಪ್ರದೇಶವೊಂದರಲ್ಲಿ ಸಿಲುಕಿತ್ತು. ಆ ಪ್ರದೇಶವು ಒಂಗೋಲ್ ಮತ್ತು ಉಪ್ಪುಗುಂಡೂರು ಹಳ್ಳಿಗಳ ನಡುವೆ ಇದ್ದಿತು. ಬಾಬೂಜಿಯವರು ಆ ಕಾಲದಲ್ಲೇ ಆ ಪ್ರದೇಶದಲ್ಲಿ ಆಧ್ಯಾತ್ಮದ ಬೀಜ ಬಿತ್ತಿರಲಿಕ್ಕೂ ಸಾಕು ಹಾಗೂ ಫಲಿತಾಂಶವಾಗಿ ಇಂದು ಇದು ಹಲವು ನೂರು ಅಭ್ಯಾಸಿಗಳು ಬೆಂಬಲಿಸುವ ಸಂಪೂರ್ಣ ಆಶ್ರಮವಾಗಿದೆ.



90ರ ದಶಕದ ಮೊದಲ ಭಾಗದಲ್ಲಿ ಒಂಗೋಲಿನ ಮೊದಲ ಪ್ರಶಿಕ್ಷಕರಾದ ಸೋ.ಕೆ.ಕುಪ್ಪುಸ್ವಾಮಿಯವರೊಂದಿಗೆ ಬೆರಳೆಣಿಕೆಯ ಅಭ್ಯಾಸಿಗಳು ಇದ್ದರು. 1994 ಇಸವಿಯಲ್ಲಿ ಮಿಷನ್ನಿಗೆ ಸೇರಿದ ಸೋ ಬಿ.ನಾಗೇಶ್ವರರಾವ್‌ರವರು ಮಿಷನ್ನಿನ ವಿಕಸನದಲ್ಲಿ ಅಗಣಿತ ಸಹಕಾರ ನೀಡಿದರು. 1999ರಲ್ಲಿ ಒಂಗೋಲ್ ಪಟ್ಟಣ ಮತ್ತು ಚಿಮಕುರ್ತಿ, ಮೇದಾರಮೆಟ್ಲ, ಅದ್ದಂಕಿ ಗ್ರಾಮಗಳೂ ಸೇರಿದಂತೆ ಅಭ್ಯಾಸಿಗಳ ಸಂಖ್ಯೆಯು 350ಕ್ಕೇರಿತು. ಸೋ.ನಾಗೇಶ್ವರರಾವ್‌ರವರನ್ನು ಪ್ರಶಿಕ್ಷಕರನ್ನಾಗಿ ನೇಮಿಸಲಾಯಿತು ಹಾಗೂ ಸತ್ಸಂಗಗಳು ಅವರ ಮನೆಯಲ್ಲಿ ನಡೆಯಲಾರಂಭಿಸಿದವು. ಆಶ್ರಮದ ಅಗತ್ಯವು ಅವಶ್ಯವಾಗಿ ಕಂಡು ಕೆಲವು ಸ್ಥಳೀಯ ಅಭ್ಯಾಸಿಗಳ ಸಹಕಾರದಿಂದ ಆಶ್ರಮಕ್ಕಾಗಿ ಐದು ಎಕರೆ ಮತ್ತು ಕಾಲೋನಿಗಾಗಿ ನಲವತ್ತೊಂಬತ್ತು ಎಕರೆ ಜಾಗವನ್ನು ಒಂಗೋಲಿನ ಹೊರವಲಯದ ಎಸ್.ಎನ್.ಪದುಮಂಡಲ್‌ನ ಪೆರ್ನಮಿಟ್ಟ ಗ್ರಾಮದ ಪರಿಧಿಯಲ್ಲಿ ತೆಗೆದುಕೊಳ್ಳಲಾಯಿತು.



ಪೂಜ್ಯ ಗುರುಗಳು ಪ್ರಸ್ತಾಪಿತ ನಿವೇಶನಕ್ಕೆ 22 ಡಿಸೆಂಬರ್ 2000ರಂದು ಭೇಟಿ ನೀಡಿದರು, ಅಡಿಗಲ್ಲು ಹಾಕಿ ನಿರ್ಮಾಣ ಯೋಜನೆಯನ್ನು ಅನುಮೋದಿಸಿದರು. ನಂತರ ನಿರ್ಮಾಣ ಕಾರ್ಯಪ್ರಗತಿ ವೀಕ್ಷಿಸಲು ಗುರುಗಳು ಎರಡು ಬಾರಿ ಭೇಟಿ ನೀಡಿದರು. ಗುರುಗಳು 7 ಜನವರಿ 2004ರಂದು ಆಶ್ರಮಸಮುಚ್ಚಯವನ್ನು ಉದ್ಘಾಟಿಸಿದರು ಹಾಗೂ ತಮ್ಮ ಗುರು ಬಾಬೂಜಿಮಹಾರಾಜರಿಗೆ ಅದನ್ನು ಸಮರ್ಪಿಸುತ್ತಾ ಅದಕ್ಕೆ ಧರ್ಮಾಶ್ರಮ ಎಂದು ಹೆಸರು ನೀಡಿದರು. ಈ ಸಂದರ್ಭದಲ್ಲಿ ಆರು ಸಾವಿರ ಅಭ್ಯಾಸಿಗಳು ಕೂಡಿದ್ದರು ಮತ್ತು ಗುರುಗಳು ಮಹಾನಗರಗಳೊಂದಿಗೆ ಸ್ಪರ್ಧಿಸಬಲ್ಲ ವಿಶಿಷ್ಟ ಕಟ್ಟಡದ ರಚನೆಗೆ ಕಾರಣೀಭೂತರಾದ ಸ್ಥಳೀಯ ಅಭ್ಯಾಸಿಗಳ ಕೊಡುಗೆಯನ್ನು ಸ್ಮರಿಸುತ್ತಾ 'ಹೃದಯಗಳ ಕೊಡುಗೆ' ಎಂಬ ವಿಷಯದ ಬಗ್ಗೆ ಮಾತನಾಡಿದರು.



ಕಟ್ಟಡದ ಮೊದಲ ಮಹಡಿಯಲ್ಲಿ ಎದುರಿನಲ್ಲಿ ವೈಭವಯುತ ಮೆಟ್ಟಿಲುಗಳೊಂದಿಗೆ ವಿಶಾಲ ಧ್ಯಾನಮಂದಿರ (2000 ಜನಕ್ಕಾಗುವಷ್ಟು), ತಳಮನೆಯಲ್ಲಿ ವಸತಿಸ್ಥಳ, ಗುರುಗಳ ಕುಟೀರ, ಪಾಕಶಾಲೆ, ಶೌಚಾಲಯಗಳು ಮತ್ತು ವಿದ್ಯುದುತ್ಪನ್ನ ಕೋಣೆಗಳಿವೆ. ರಮ್ಯ ಭೂದೃಶ್ಯದೊಂದಿಗೆ ನೆರಳು ನೀಡುವ ಮರಗಳು ಆಶ್ರಮದ ವಾತಾವರಣಕ್ಕೆ ಮೆರುಗು ನೀಡುತ್ತವೆ. ಒಂಗೋಲ್ ಉಚಿತ ಭೋಜನ ನೀಡುವ ಆಶ್ರಮಗಳಲ್ಲೊಂದಾಗಿದೆ. ಇಲ್ಲಿ ಮುಂಜಾನೆಯ ಸತ್ಸಂಗವು 6.30ಕ್ಕೆ ನೆರವೇರುತ್ತದೆ.





**To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org**

© 2009 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.